KAGD400006682025

**ಹಿರಿಯ ದಿವಾಣಿ ನ್ಯಾಯಾಧೀಶರು ನ್ಯಾಯಾಲಯ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ರೋಣ**
**ಉಪಸ್ಥಿತರುಃ ಶ್ರೀ ಮಹದೇವಪ್ಪ ಹೆಚ್., ಬಿ.ಎ., ಎಲ್.ಎಲ್.ಬಿ.**

**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ರೋಣ**

**ದಿನಾಂಕಃ 14 ನೇ ಜುಲೈ ಮಾಹೆ 2026**

**ಆರ್.ಎ.ಸಂಖ್ಯೆಃ 32/2025**

**ಮೇಲ್ಮನವಿದಾರರಃ**

1. ಅನ್ನಕ್ಕ ಕೋಂ ತಿಪ್ಪಣ್ಣ ಮುರಗಿ,
   ವಯಾಃ 45 ವರ್ಷ, ಉದ್ಯೋಗಃ ಶೇತ್ಕಿ,
   ಸಾಃ ಸವಡಿ, ತಾಃ ರೋಣ, ಜಿಃಗದಗ.
   ಹಾ/ವಃ ಕೊತಬಾಳ, ತಾಃ ರೋಣ.
   ಮೋ. ನಂಃ 9740360282.

2. ವೀರಣ್ಣ ತಂದೆ ತಿಪ್ಪಣ್ಣ ಮುರಗಿ,
   ವಯಾಃ 36 ವರ್ಷ, ಉದ್ಯೋಗಃ ಶೇತ್ಕಿ,
   ಸಾಃ ಸವಡಿ, ತಾಃ ರೋಣ, ಜಿಃಗದಗ.
   ಹಾ/ವಃ ಕೊತಬಾಳ, ತಾಃ ರೋಣ.

3. ಸಾವಿತ್ರಿ ಕೋಂ ಮೈಲಾರಪ್ಪ ಯಲಬುರ್ಗಿ,
   ವಯಾಃ 34 ವರ್ಷ, ಉದ್ಯೋಗಃ ಗೃಹಿಣಿ,
   ಸಾಃ ಬೆಟಗೇರಿ, ತಾಃ ಗದಗ, ಜಿಃಗದಗ.

**(ಮೇಲ್ಮನವಿದಾರರ ಪರ ಶ್ರೀ ಬಿ.ಎ.ಎಸ್., ವಕೀಲರು)**

**ವಿರುದ್ಧ-**

**ಎದುರುದಾರರುಃ**

1. ವೀರಪ್ಪ ತಂದೆ ಕಳಕಪ್ಪ ಮುರಗಿ,
   ವಯಾಃ 61 ವರ್ಷ, ಉದ್ಯೋಗಃ ಶೇತ್ಕಿ,
   ಸಾಃ ಸವಡಿ, ತಾಃ ರೋಣ, ಜಿಃಗದಗ.
   ಹಾ/ವಃ ಎಸ್.ಎಮ್.ಕೃಷ್ಣಾ ನಗರ ಆಶ್ರಯ
   ಕಾಲೋನಿ ಗದಗ.
   ಮೋ.ನಂಃ 7259253801.

2. ಬಸವ್ವ ಕೋಂ ಬಸಪ್ಪ ಅವ್ವಣ್ಣವರ,
ವಯಾಃ 74 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಶೆಲವಡಿ, ತಾಃ ನವಲಗುಂದ, ಜಿಃ ಧಾರವಾಡ.

3. ಶೇಖರಪ್ಪ ತಂದೆ ಕಳಕಪ್ಪ ಮುರಗಿ,
ವಯಾಃ 56 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಮನೆ ನಂಃ 159, ಜೆ.ಪಿ. ನಗರ ಗೋಕುಲ
ರೋಡ ಹುಬ್ಬಳ್ಳಿ, ತಾಃ ಹುಬ್ಬಳ್ಳಿ.

4. ವೀರುಪಾಕ್ಷಿ @ ವೀರುಪಾಕ್ಷಪ್ಪ ತಂದೆ ಕಳಕಪ್ಪ
ಮುರಗಿ,
ವಯಾಃ 61 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ರಾಚೋಟೇಶ್ವರ ದೇವಸ್ಥಾನದ ಹತ್ತಿರ
ಒಕ್ಕಲಗೇರಿ ಓಣಿ ಗದಗ, ತಾಃ ಗದಗ, ಜಿಃಗದಗ.
ಮೋ.ನಂಃ9035267240.

5. ಸಂಗವ್ವ ಕೋಂ ಹುಚ್ಚಪ್ಪ ಅಂಗಡಿ,
ವಯಾಃ 74 ವರ್ಷ, ಉದ್ಯೋಗಃ ಗೃಹಿಣಿ,
ಸಾಃ ಮನೆ ನಂ.7 ಮಂಜುನಾಥ ನಿಲಯ
ಗುರುಮೂರ್ತಿರೆಡ್ಡಿ ಲೇಔಟ 3 ನೇ ಹಂತ
ರಾಮೂರ್ತಿ ನಗರ,
ಬೆಂಗಳೂರ- 560016 ಮೋ.ನಂಃ 9741350001.

**(ಎದುರುದಾರ ಸಂಖ್ಯೆ.1 ರಿಂದ 4 ರವರ ಪರವಾಗಿ ಶ್ರೀ ಬಿ.ಎಸ್.ಬಿ., ವಕೀಲರು)**
**(ಎದುರುದಾರ ಸಂಖ್ಯೆ.5 ರವರು ಗೈರುಹಾಜರಾಗಿರುತ್ತಾರೆ)**

| | |
|---|---|
| **ಮೇಲ್ಮನವಿಯು ದಾಖಲಾದ ದಿನಾಂಕಃ** | **27/10/2025** |
| **ಮೇಲ್ಮನವಿಯ ಸ್ವರೂಪ** | **ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರೋಣ ರವರು ದಿನಾಂಕ 01/09/2025 ರಂದು ಅಸಲು ದಾವಾ ನಂ.97/2019 ರಲ್ಲಿ ಮಾಡಿರುವ ಡಿಕ್ರಿಯನ್ನು ಪ್ರಶ್ನಿಸಿ** |
| **ತೀರ್ಪು ಪ್ರಕಟಿಸಿದ ದಿನಾಂಕಃ** | **14/07/2026** |
| **ಒಟ್ಟು ಅವಧಿ** | **ವರ್ಷ ತಿಂಗಳು ದಿನಗಳು** |
| | **00 08 17** |

## ::ತೀರ್ಪು::

ಮೇಲ್ಮನವಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 41 ನಿಯಮ 1 ಹಾಗೂ ಸಹವಾಚಕ ಕಲಂ 96 ರ ಅಡಿಯಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರೋಣ ರವರು ದಿನಾಂಕ 01/09/2025 ರಂದು ಅಸಲು ದಾವಾ ನಂ.97/2019 ರಲ್ಲಿ ಮಾಡಿರುವ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ವಾದಿ 1 ರಿಂದ 3 ರವರು ಈ ಅಪೀಲನ್ನು ಸಲ್ಲಿಸಿರುತ್ತಾರೆ.

2. ವಿಚಾರಣಾ ನ್ಯಾಯಾಲಯದಲ್ಲಿ ಮೇಲ್ಮನವಿದಾರರು ವಾದಿ 1 ರಿಂದ 3 ರವರಾಗಿದ್ದು, ಎದುರುದಾರರು ಪ್ರತಿವಾದಿಗಳು ಮತ್ತು ವಾದಿ ಸಂಖ್ಯೆ.4 ರವರಾಗಿರುತ್ತಾರೆ.

3. ವಿಚಾರಣಾ ನ್ಯಾಯಾಲಯದಲ್ಲಿ ವಾದಿಗಳು, ಪ್ರತಿವಾದಿಗಳ ವಿರುದ್ಧ ರೋಣ ತಾಲ್ಲೂಕು ಸವಡಿ ಗ್ರಾಮದ ರಿ.ಸ.ನಂಬರಃ 518/1 ರಲ್ಲಿಯ ವಿಸ್ತೀರ್ಣ 3 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ದಾವೆಯನ್ನು ಸಲ್ಲಿಸಿದ್ದು, ವಿಚಾರಣಾ ನ್ಯಾಯಾಲಯವು, ವಿಚಾರಣೆಯನ್ನು ನಡೆಸಿ ದಾವೆಯನ್ನು ವಜಾಗೊಳಿಸಿದ್ದು ಇರುತ್ತದೆ. ಸದರಿ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ವಾದಿ 1 ರಿಂದ 3 ರವರು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

4. ಮೇಲ್ಮನವಿದಾರರು, ಈ ಮೇಲ್ಮನವಿಯನ್ನು ಸಲ್ಲಿಸಿದ ನಂತರ ಎದುರುದಾರರಿಗೆ ನ್ಯಾಯಾಲಯದಿಂದ ನೋಟೀಸ್ ನೀಡಲಾಗಿ, ಸದರಿ ನೋಟೀಸ್ ಜಾರಿಯಾದ ನಂತರ ಎದುರುದಾರ 1 ರಿಂದ 4 ರವರು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿರುತ್ತಾರೆ. 5 ನೇ ಎದುರುದಾರರು ಗೈರುಹಾಜರಾಗಿರುತ್ತಾರೆ. ನಂತರ ವಿಚಾರಣಾ ನ್ಯಾಯಾಲಯದಿಂದ ಕಡತವನ್ನು ತರಿಸಲಾಗಿ ಪರಿಶೀಲಿಸಲಾಗಿದೆ.

5. ಈ ಮೇಲ್ಮನವಿಯಲ್ಲಿ ಪಕ್ಷಗಾರರನ್ನು ವಾದಿಗಳು ಮತ್ತು ಪ್ರತಿವಾದಿಗಳು ಎಂದು ಸಂಭೋದಿಸಲಾಗಿದೆ.

6. **<u>ದಾವೆಯ ವಾಸ್ತವಾಂಶ ಈ ಕೆಳಗಿನಂತಿರುತ್ತದೆ:</u>**

ವಾದಿಗಳು ಮತ್ತು ಪ್ರತಿವಾದಿಗಳ ಅಜ್ಜ ಸಂಗಪ್ಪ ಬಿನ್ ಪ್ರಭಪ್ಪ ಮುರಗಿರವರಿಗೆ ಆತನ ಸಹೋದರರೊಂದಿಗೆ ಮಾಡಿಕೊಂಡ ಮೌಖಿಕ ವಿಭಾಗದಲ್ಲಿ 1958 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಲ್ಲಿ ದಾವಾ ಆಸ್ತಿಯು ಸಂಗಪ್ಪನ 2 ನೇ ಮಗ ವೀರಭದ್ರಪ್ಪ @ ವೀರಪ್ಪ (ವಾದಿ 1 ರಿಂದ 3 ರವರ ಅಜ್ಜ ಮತ್ತು ವಾದಿ 4 ರವರ ತಂದೆ) ಆಸ್ತಿಯು ವಿಭಾಗದಲ್ಲಿ ಬಂದಿದ್ದು, ಸದರಿ ವಿಭಾಗದಲ್ಲಿ ಬಂದ ಆಸ್ತಿಯು ಎಂ.ಇ ನಂಬರಃ 7537 ದಿನಾಂಕಃ05.09.1958 ರಂತೆ ಆಗಿರುತ್ತದೆ. ಸದರಿ ವೀರಭದ್ರಪ್ಪರವರು ದಿನಾಂಕಃ09.02.1980 ರಂದು ಮರಣಹೊಂದಿರುತ್ತಾರೆ, ಅವರ ಮರಣಾನಂತರ ಆತನ ಒಬ್ಬನೇ ಮಗ ತಿಪ್ಪಣ್ಣ ಬಿನ್ ವೀರಭದ್ರಪ್ಪ @ ವೀರಪ್ಪ ಮುರಗಿರವರ ಹೆಸರಿಗೆ ಎಂ.ಇ ನಂಬರಃ 10448 ರಂತೆ ದಿನಾಂಕಃ 22.03.2018 ರಂದು ಖಾತೆಯಾಗಿರುತ್ತದೆ. ಸದರಿ ವೀರಭದ್ರಪ್ಪ @ ವೀರಪ್ಪ ಮುರಗಿ ಮತ್ತು ಆತನ ಒಬ್ಬನೇ ಮಗ ತಿಪ್ಪಣ್ಣರವರು ಮರಣಹೊಂದಿದ ನಂತರ ವಾದಿಗಳು ದಾವಾ ಆಸ್ತಿಗೆ ಜಂಟಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆ.

7. ವಾದಿಗಳು ತಮ್ಮ ವಾದಪತ್ರದಲ್ಲಿ ಮುಂದುವರೆದು, ಪ್ರತಿವಾದಿಗಳ ತಂದೆ ಕಳಕಪ್ಪರವರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೆ ಇದ್ದರೂ ಸಹಾ ಮತ್ತು ವಾದಿಗಳ ತಂದೆ ತಿಪ್ಪಣ್ಣ ಹಾಗೂ ವಾದಿಗಳ ಸಮ್ಮತಿ ಇಲ್ಲದೆ ಎಂ.ಆರ್.ನಂಬರಃ 853 ರಂತೆ ದಿನಾಂಕಃ 09.11.1998 ರಂತೆ ತಿಪ್ಪಣ್ಣ ಬಿನ್ ವೀರಭದ್ರಪ್ಪ @ ವೀರಪ್ಪ ಮುರಗಿ ಮತ್ತು ಆತನ ಸಹೋದರ ಕಳಕಪ್ಪ ಬಿನ್ ಸಂಗಪ್ಪ ಮುರಗಿರವರು ಮೌಖಿಕವಾಗಿ ವಿಭಾಗ ಮಾಡಿಕೊಂಡು, ಸದರಿ ವಿಭಾಗದಲ್ಲಿ ದಾವಾ ಆಸ್ತಿಯನ್ನು ಕಳಕಪ್ಪರವರಿಗೆ ಮತ್ತು ಕೊತಬಾಳದಲ್ಲಿರುವ ಬೇರೆ

ಆಸ್ತಿಯನ್ನು ವಾದಿ 1 ರಿಂದ 3 ರವರ ತಂದೆ ತಿಪ್ಪಣ್ಣರವರಿಗೆ ಹಂಚಿಕೆ ಮಾಡಿಕೊಂಡಿರುತ್ತಾರೆ. ಸದರಿ ಕೊತಬಾಳದಲ್ಲಿರುವ ಆಸ್ತಿಗಳು ಮೂಲತಃ ತಿಪ್ಪಣ್ಣರವರ ತಾಯಿ ಮತ್ತು 4ನೇ ವಾದಿಗೆ ಸ್ತ್ರೀಧನ ಆಸ್ತಿಗಳಾಗಿರುತ್ತವೆ. ಈಗಾಗಲೇ ಸಂಗಪ್ಪರವರು ಜೀವಂತವಾಗಿದ್ದಾಗ 1958 ರಲ್ಲಿ ವಿಭಾಗ ಆಗಿರುವುದರಿಂದ ಪುನಃ ಕಳಕಪ್ಪರವರಿಗೆ ವಿಭಾಗ ಮಾಡಿಕೊಳ್ಳಲು ಯಾವುದೇ ಅಧಿಕಾರ ಇರಲಿಲ್ಲ. ಪ್ರತಿವಾದಿಗಳು ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಮಾಡಿಕೊಂಡಿರುವ ಮ್ಯುಟೇಶನ್ ದಾವಾ ಆಸ್ತಿಯ ಮೇಲೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇರುವುದಿಲ್ಲ. ಆದ್ದರಿಂದ ಈ ದಾವೆಯಲ್ಲಿ ಕೋರಿಕೊಂಡಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

8. ವಾದಿಗಳು ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗಳಿಗೆ ಸಮನ್ಸ್ ನೀಡಲಾಗಿ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಗಳು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

9. ಪ್ರತಿವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1 ಹಾಗೂ 6 (ಎ) ರಡಿಯಲ್ಲಿ ಎದುರು ದಾವೆಯನ್ನು ಮಾಡಿ ತಮ್ಮ ಎದುರು ದಾವೆಯಲ್ಲಿ ವಾದಿಗಳು ಸಲ್ಲಿಸಿರುವ ಈ ದಾವೆಯನ್ನು ಕಾನೂನು ಮತ್ತು ವಾಸ್ತವಾಂಶದಡಿಯಲ್ಲಿ ಊರ್ಜಿತವಾಗಿರುವುದಿಲ್ಲ. ವಾದಿಯರು ಹೇಳುವ ಹಾಗೇ ದಾವಾ ಆಸ್ತಿ ಸನ್ 1958 ರಲ್ಲಿ ಮೂಲ ಪುರುಷ ಸಂಗಪ್ಪ ಮತ್ತು ಆತನ ಗಂಡು ಮಕ್ಕಳು ಮಾತ್ರ ಒಟ್ಟು ಕುಟುಂಬದ ಆಸ್ತಿಯನ್ನು ಕುರಿತು, ಪಾಲುವಾಟ್ನಿ ಮಾಡಿಕೊಂಡಿದ್ದು, ಆ ಪ್ರಕಾರ ದಾವಾ ಆಸ್ತಿಯು ವಾದಿಯರ ತಂದೆ/ಮಾವ/ಅಜ್ಜನಾದ ವೀರಭದ್ರಪ್ಪ ಮುರಗಿ ಇತನ ಹಿಸ್ಸಾಕ್ಕೆ ಬಂದಿದ್ದು, ಆ ಪ್ರಕಾರ ದಾವಾ ಆಸ್ತಿ ಉತಾರದಲ್ಲಿ ದಾಖಲು ಆಗಿದ್ದು ಇರುತ್ತದೆ. ಸದರಿಯವರಿಗೆ ರೋಣ ತಾಲ್ಲೂಕು ಪೈಕಿ ಕೊತಬಾಳ ಗ್ರಾಮದಲ್ಲಿ ಸ್ತ್ರೀಧನ ಆಸ್ತಿ ಇರುವುದರಿಂದ ಅವನು ಅಲ್ಲಿಯೇ ವಾಸವಾಗಿದ್ದನು, ಆ ರೀತಿ ಅಲ್ಲಿಯೇ ವಾಸವಾಗಿದ್ದರಿಂದ ದಾವಾ ಆಸ್ತಿಯಲ್ಲಿ ಬಿತ್ತಿ ಬೆಳೆಯುವುದಕ್ಕೆ ಆಗದೆ

ಇದ್ದುದರಿಂದ ಇದು ಪಡಾಬಿದ್ದು, ಜಾಲಿ ಬೆಳೆದು ಬಿತ್ತನೆಗೆ ಬಾರದಂತಾಗಿದ್ದು , ಆಗ ಪ್ರತಿವಾದಿಯರ ತಂದೆ ಅದನ್ನು ಸ್ವಚ್ಛಗೊಳಿಸಿಕೊಂಡು ದಿನಾಂಕಃ 13.05.1955 ರಿಂದ ಅದರ ಮೂಲ ಮಾಲೀಕನಾದ ವೀರಭದ್ರಪ್ಪ ತಂದೆ ಸಂಗಪ್ಪ ಮುರಗಿ ಹಾಗೂ ಆತನ ಹೆಂಡತಿ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯುವ ಹಾಗೇ ದಾವಾ ಆಸ್ತಿಯಲ್ಲಿ ವಿರುದ್ದ ಮಾಲ್ಕೀ ನಾತೆಯಿಂದ ಬಿತ್ತಿ ಬೆಳೆಯುತ್ತಾ ಬಂದಿದ್ದು, ಈ ಸಂಗತಿ ವೀರಭದ್ರಪ್ಪನಿಗೂ ಹಾಗೂ ಆತನ ಹೆಂಡತಿ ಮಕ್ಕಳಿಗೂ ತಿಳಿದಿದ್ದು, ಆತನ ಮರಣಾನಂತರ ಆತನ ಹೆಂಡತಿ ಮಕ್ಕಳು ಸಹಾ ಇದುವರೆಗೂ ಪ್ರತಿವಾದಿಯ ತಂದೆಯ ಸ್ವಾಧೀನಾನುಭವಕ್ಕೆ ಯಾವುದೇ ತಂಟೇ ತಕರಾರು ಮಾಡಿರುವುದಿಲ್ಲ ಮತ್ತು ಮಾಲೀಕತ್ವದ ಹಕ್ಕನ್ನು ಚಲಾಯಿಸಿರುವುದಿಲ್ಲ.

10. ಪ್ರತಿವಾದಿಗಳು ತಮ್ಮ ಲಿಖಿತ ತಕರಾರಿನಲ್ಲಿ ಮುಂದುವರೆದು, ದಾವಾ ಆಸ್ತಿಯನ್ನು ಪ್ರತಿವಾದಿಯರ ತಂದೆ ಕಳಕಪ್ಪ ಇತನು ಸ್ವಚ್ಛಪಡಿಸಿ ಬಿತ್ತನೆಗೆ ಯೋಗ್ಯ ಜಮೀನನ್ನಾಗಿ ಮಾಡಿದ್ದು, ಈಗ ಅದು ಬೆಲೆ ಬಾಳುವ ಆಸ್ತಿಯನ್ನಾಗಿ ಮಾಡಿದ ನಂತರ ಈ ಪ್ರತಿವಾದಿಯರಿಗೆ ಆಗದವರ ಮಾತು ಕೇಳಿ ಈ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ. ವಾದಿಯರು ಹೇಳುವ ಹಾಗೇ ಸಂಗಪ್ಪನ ಮಗ ತಿಪ್ಪಣ್ಣರವರಾಗಲೀ, ವಾದಿಯರಾಗಲೀ ಯಾವ ಕಾಲಕ್ಕೂ ಸಹಾ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುವುದಿಲ್ಲ, ಹೀಗಾಗಿ ವಾದಿಯರ ಶಾಂತಿಯುತ ಸ್ವಾಧೀನಾನುಭವಕ್ಕೆ ಪ್ರತಿವಾದಿಯರು ತಂಟೇ ತಕರಾರು ಮಾಡುವ ಪ್ರಶ್ನೆಯೇ ದಾವೆಯಲ್ಲಿ ಉದ್ಭವವಾಗಿರುವುದಿಲ್ಲ. ದಾವಾ ಆಸ್ತಿಯ ಮೌಲ್ಯ ಸುಮಾರು ರೂ.8,00,000/- ಆಗುತ್ತಿದ್ದು, ಈ ನ್ಯಾಯಾಲಯಕ್ಕೆ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಇರುವುದಿಲ್ಲ.

11. ಪ್ರತಿವಾದಿಯರು ತಮ್ಮ ಎದುರು ದಾವೆಯನ್ನು ಮುಂದುವರೆದು, ಪ್ರತಿವಾದಿಯರ ತಂದೆ ಕಳಕಪ್ಪ ಇತನು ದಾವಾ ಆಸ್ತಿ ಸವಡಿ ಗ್ರಾಮದ ರಿ.ಸ.ನಂಬರಃ 518/1 ರಲ್ಲಿ ವಿಸ್ತೀರ್ಣ 3 ಎಕರೆ 37 ಗುಂಟೆ ಇದ್ದು, ಅದರ ಮಾಲೀಕರಾದ ವೀರಭದ್ರಪ್ಪ ತಂದೆ ಸಂಗಪ್ಪ ಮುರಗಿ ಇವರಿಗೆ ತಿಳಿಯುವ

ಹಾಗೇ ದಿನಾಂಕಃ 13.05.1955 ರಂದು ವಿರುದ್ಧ ಮಾಲ್ಕೀ ನಾತೆಯಿಂದ ಬಿತ್ತಿ ಬೆಳೆವುದನ್ನು ಮಾಡುತ್ತಾ ಬಂದಿದ್ದು. ಆದ್ದರಿಂದ ವಾದಿಯರ ದಾವೆಯನ್ನು ವಜಾಗೊಳಿ ಎದುರುದಾರರು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

12. ವಿಚಾರಣಾ ನ್ಯಾಯಾಲಯವು ಈ ಮೇಲಿನ ವಾಸ್ತವಾಂಶಗಳನ್ನು ಆಧರಿಸಿ ವಿಚಾರಣಾ ನ್ಯಾಯಾಲಯವು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುವರು :-

**::ISSUES::**

1) Does the plaintiffs prove that, they are the joint owners in possession of the suit property?

2) Does the plaintiffs further prove that the defendants are interfering in peaceful possession and enjoyment of the suit property?

3) Does the defendants prove that they are the owners in possession of suit property by adverse possession?

4) Does the plaintiffs are entitled for equitable relief of perpetual injunction against the defendants?

5) Does the defendants are entitled for the reliefs as sought for in the counterclaim?

6) What order or decree?

13. ಈ ಮೇಲಿನ ವಿವಾದಾಂಶಗಳಿಗೆ ವಿಚಾರಣಾ ನ್ಯಾಯಾಲಯದ ವಿವಾದಾಂಶ 1 ರಿಂದ 5 ಕ್ಕೆ ನಕಾರಾತ್ಮಕವಾಗಿ, ವಿವಾದಾಂಶ 6 ಕ್ಕೆ ಮಾಡಲಾದ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ ಎಂದು ಉತ್ತರಿಸಲಾಗಿದೆ.

14. ವಿಚಾರಣಾ ನ್ಯಾಯಾಲಯವು ಮಾಡಿರುವ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಈ ಕೆಳಕಂಡ ಕಾರಣಗಳ ಮೇರೆಗೆ ವಾದಿ 1 ರಿಂದ 3 ರವರು ಈ ಮೇಲ್ಮನವಿಯನ್ನು ಸಲ್ಲಿಸಿರುವರು:-

ವಿಚಾರಣಾ ನ್ಯಾಯಾಲಯವು ಮಾಡಿರುವ ತೀರ್ಪು ಮತ್ತು ಡಿಕ್ರಿಯು ಕಾನೂನು ಮತ್ತು ವಾಸ್ತವಾಂಶಗಳಿಂದ ಊರ್ಜಿತವಾಗಿರುವುದಿಲ್ಲ.

ವಿಚಾರಣಾ ನ್ಯಾಯಾಲಯವು ದಾವಾ ಆಸ್ತಿಯು ಸವಡಿ ಗ್ರಾಮದ ರಿ.ಸ.ನಂಬರಃ 518/1 ರಲ್ಲಿಯ ವಿಸ್ತೀರ್ಣ 3 ಎಕರೆ 37 ಗುಂಟೆ ಇದ್ದು, ಇವತ್ತಿನವರೆಗೂ ಸಹಾ ಮೇಲ್ಮನವಿದಾರರು ಸ್ವಾಧೀನಾನುಭವದಲ್ಲಿರುತ್ತಾರೆ.

ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯು ಕಾನೂನಿಗೆ ವಿರುದ್ಧವಾಗಿ ಆದೇಶ ಆಗಿದ್ದು, ವಿಚಾರಣಾ ನ್ಯಾಯಾಲಯದಲ್ಲಿ ಉಭಯಪಕ್ಷಗಾರರು ಹಾಜರುಪಡಿಸಿರುವ ದಾಖಲೆಯನ್ನು ಮತ್ತು ಪುರಾವೆಗಳನ್ನು ಸರಿಯಾಗಿ ಗ್ರಹಿಸದೇ ಹಾಗೂ ಕಾನೂನಿನ ಅಂಶಗಳನ್ನು ಪರಿಗಣಿಸುವಲ್ಲಿ ವಿಫಲವಾಗಿರುತ್ತದೆ.

ವಿಚಾರಣಾ ನ್ಯಾಯಾಲಯವು ತೀರ್ಪು ಮತ್ತು ಡಿಕ್ರಿಯನ್ನು ಮಾಡುವಾಗ ಕಾನೂನಿನ ಸರಿಯಾದ ವಿಶ್ಲೇಷಣೆಯನ್ನು ಮಾಡಿರುವುದಿಲ್ಲ.

ವಿಚಾರಣಾ ನ್ಯಾಯಾಲಯವು ದಾವೆಯಲ್ಲಿ ಮುಖ್ಯವಾದ ಅಂಶಗಳನ್ನು ಪರಿಗಣಿಸದೇ ತಪ್ಪು ಗೃಹಿಕೆಯಿಂದ ದಾವೆಯನ್ನು ವಜಾಗೊಳಿಸಿರುವುದು ಕಾನೂನಿಗೆ ವಿರುದ್ಧವಾಗಿರುತ್ತದೆ.

ವಿಚಾರಣಾ ನ್ಯಾಯಾಲಯವು ಪ್ರಸ್ತುತ ಕಾನೂನಿನ ಅಂಶಗಳನ್ನು ದಾವೆಯ ಸಂಗತಿಗಳಿಗೆ ಅನ್ವಯಿಸದೆ ದಾವೆಯನ್ನು ವಜಾಗೊಳಿಸಿದ್ದು ಕಾನೂನುಬದ್ಧವಾಗಿರುವುದಿಲ್ಲ.

ವಿಚಾರಣಾ ನ್ಯಾಯಾಲಯದ ತೀರ್ಪು ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿರುತ್ತದೆ .

ವಿಚಾರಣಾ ನ್ಯಾಯಾಲಯವು ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಗಣಿಸದೇ ದಾವೆಯನ್ನು ವಜಾಗೊಳಿಸಿದ್ದು ಕಾನೂನಿಗೆ ವಿರುದ್ಧವಾಗಿರುತ್ತದೆ.

ಆದ್ದರಿಂದ ವಿಚಾರಣಾ ನ್ಯಾಯಾಲಯವು ಅಸಲು ದಾವಾ ಸಂಖೆ.97/2019 ರಂದು ದಿನಾಂಕಃ 01/09/2025 ರಂದು ಮಾಡಿರುವ ತೀರ್ಪು ಮತ್ತು ಡಿಕ್ರಿಯನ್ನು ಈ ಅಪೀಲನ್ನು ಪುರಸ್ಕರಿಸುವ ಮೂಲಕ ರದ್ದುಪಡಿಸಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

15. ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಸಲ್ಲಿಸಿದ ನಂತರ ಎದುರುದಾರರಿಗೆ ನೋಟೀಸ್ ನೀಡಲಾಗಿ, ಎದುರುದಾರ 1 ರಿಂದ 4 ರವರು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿರುತ್ತಾರೆ. 5 ನೇ ಎದುರುದಾರರು ಗೈರುಹಾಜರಾಗಿರುತ್ತಾರೆ.

16. ಅಪೀಲುದಾರರು ಹಾಗೂ ಎದುರುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

17. ವಿಚಾರಣಾ ನ್ಯಾಯಾಲಯದ ಕಡತವನ್ನು ತರಿಸಿಕೊಂಡು ವಾದ ಮಂಡನೆಯನ್ನು ಆಲಿಸಲಾಯಿತು ನಂತರ ಈ ನ್ಯಾಯಾಲಯದ ಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುವವು.

**::ಅಂಶಗಳು::**

1. ಅಪೀಲುದಾರರು ಈ ನ್ಯಾಯಾಲಯದ ಮುಂದೆ ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾರೆಂದು ರುಜುವಾತುಪಡಿಸಿರುತ್ತಾರೆಯೇ?

2. ಅಪೀಲುದಾರರು ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಯನ್ನು ಹಸ್ತಕ್ಷೇಪ ಮಾಡುವ ಅವಶ್ಯಕತೆ ಇರುತ್ತದೆಂದು ರುಜುವಾತುಪಡಿಸಿರುತ್ತಾರೆಯೇ ?
3. ಏನು ಆದೇಶ ?

18. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತವೆ:-

**ಅಂಶ ನಂ.1 - ನಕಾರಾತ್ಮಕವಾಗಿ.**

**ಅಂಶ ನಂ.2 - ನಕಾರಾತ್ಮಕವಾಗಿ.**

**ಅಂಶ ನಂ.3 - ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ.**

**:ಕಾರಣಗಳು:**

19. **ಅಂಶ 1 ಮತ್ತು 2** : ಈ ನ್ಯಾಯಾಲಯವು ಅಪೀಲು ನ್ಯಾಯಾಲಯ ಆಗಿದ್ದು, ವಿಚಾರಣಾ ನ್ಯಾಯಾಲಯದ ಮುಂದೆ ಉಭಯಪಕ್ಷಗಾರರು ಒದಗಿಸಿರುವ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯ ಹಾಗೂ ದಾವೆಯ ಸಂಗತಿಗಳನ್ನು ಪುನರ್ ಪರಿಶೀಲಿಸಿ ತೀರ್ಪು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ ಮತ್ತು ದಾವೆಯ ಸಂಗತಿಗಳ ಮೇಲೆ ತೀರ್ಮಾನಿಸುವ ಅಂತಿಮ ನ್ಯಾಯಾಲಯ ಆಗಿರುತ್ತದೆ, ಆದ್ದರಿಂದ ಉಭಯಪಕ್ಷಗಾರರು ವಿಚಾರಣಾ ನ್ಯಾಯಾಲಯದ ಮುಂದೆ ಒದಗಿಸಿರುವ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯವನ್ನು ಈ ನ್ಯಾಯಾಲಯವು ಪರಿಗಣಿಸಬೇಕಾಗಿರುತ್ತದೆ.

20. ವಾದಿಗಳ ದಾವೆ ಏನೆಂದರೆ, ವಾದಿಗಳು ಮತ್ತು ಪ್ರತಿವಾದಿಗಳ ಮೂಲ ಪುರುಷ ಸಂಗಪ್ಪ ಬಿನ್ ಪ್ರಭಪ್ಪ ಮುರಗಿ ಆತನ 3 ಜನ ಗಂಡು ಮಕ್ಕಳು 1958 ರಲ್ಲಿ ವಿಭಾಗ ಮಾಡಿಕೊಂಡಿದ್ದು, ಆ ವಿಭಾಗದಲ್ಲಿ ದಾವಾ

ಆಸ್ತಿಯು ಸಂಗಪ್ಪನ 2ನೇ ಮಗ ವೀರಭದ್ರಪ್ಪ @ ವೀರಪ್ಪರವರ ಹಿಸ್ಸೆಗೆ ಬಂದಿದ್ದು, ಆ ಪ್ರಕಾರ ಆತನ ಹೆಸರಿಗೆ ಎಂ.ಇ.ನಂಬರಃ 7537 ರಂತೆ ದಿನಾಂಕಃ 05.09.1958 ರಂದು ಖಾತೆಯಾಗಿರುತ್ತದೆ. ವೀರಭದ್ರಪ್ಪರವರು ದಿನಾಂಕಃ 09.02.1980 ರಂದು ಮರಣಹೊಂದಿದ್ದು, ಆತನಿಗೆ ತಿಪ್ಪಣ್ಣ ಬಿನ್ ವೀರಭದ್ರಪ್ಪ ಮುರಗಿ ಒಬ್ಬನೇ ಮಗನಿದ್ದು, ವೀರಭದ್ರಪ್ಪ ಮುರಗಿರವರ ಮರಣಾನಂತರ ಆತನ ಒಬ್ಬನೇ ಮಗ ತಿಪ್ಪಣ್ಣರವರ ಹೆಸರಿಗೆ ಮ್ಯುಟೇಶನ್ ನಂಬರಃ 10448 ರಂತೆ ದಿನಾಂಕಃ 03.09.1982 ರಂದು ಖಾತೆಯಾಗಿದ್ದು, ಸದರಿ ತಿಪ್ಪಣ್ಣರವರು ದಿನಾಂಕಃ 22.03.2018 ರಂದು ಮರಣಹೊಂದಿದ್ದು, ಆತನ ಮರಣಾನಂತರ ವಾದಿಗಳು ದಾವಾ ಆಸ್ತಿಗಳಲ್ಲಿ ಜಂಟಿ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ಪ್ರತಿವಾದಿಗಳಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲದೇ ಇದ್ದರು ಸಹಾ ಪ್ರತಿವಾದಿಗಳ ತಂದೆ ಕಳಕಪ್ಪರವರು ಆತನ ಹೆಸರಿಗೆ ಎಂ.ಆರ್.ನಂಬರಃ 853 ರಂತೆ ದಿನಾಂಕಃ 09.11.1998 ರಂತೆ ತಿಪ್ಪಣ್ಣ ಮತ್ತು ಕಳಕಪ್ಪರವರು ಮೌಖಿಕವಾಗಿ ವಿಭಾಗ ಮಾಡಿಕೊಂಡಾಗ ಕಳಕಪ್ಪರವರ ಹಿಸ್ಸೆಗೆ ಬಂದಿರುತ್ತದೆ. ಬೇರೆ ಆಸ್ತಿಯು ಕೊತಬಾಳದಲ್ಲಿ ಇದ್ದು ಅದು ತಿಪ್ಪಣ್ಣರವರ ಹಿಸ್ಸೆಗೆ ಬಂದಿರುತ್ತದೆಂದು ಖಾತೆ ಮಾಡಿಕೊಂಡಿರುತ್ತಾರೆ. ಆದ್ದರೆ ಕೊತಬಾಳದಲ್ಲಿ ಇರುವ ಆಸ್ತಿಯು ತಿಪ್ಪಣ್ಣರವರ ತಾಯಿಯ ಆಸ್ತಿಯಾಗಿದ್ದು ಅದು ಸ್ತ್ರೀಧನ ಆಸ್ತಿಯಾಗಿರುತ್ತದೆ. ಈಗಾಗಲೇ ಮೂಲ ಪುರುಷ ಸಂಗಪ್ಪರವರು ಜೀವಂತವಾಗಿದ್ದಾಗ 1958 ರಲ್ಲಿಯೇ ವಿಭಾಗ ಆಗಿರುವುದರಿಂದ ತಿಪ್ಪಣ್ಣ ಮತ್ತು ಕಳಕಪ್ಪರವರು ವಿಭಾಗ ಮಾಡಿಕೊಳ್ಳಲು ಯಾವುದೇ ಅಧಿಕಾರ ಇರಲಿಲ್ಲ. ಪ್ರತಿವಾದಿಗಳು ತಮ್ಮ ಹೆಸರಿಗೆ ಸೃಷ್ಟಿಸಿಕೊಂಡಿರುವ ಎಂ.ಆರ್. ವಾದಿಗಳಿಗೆ ಬಂಧನಕಾರಿಯಾಗಿರುವುದಿಲ್ಲ. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಿರುವಂತೆ ಡಿಕ್ರಿ ಮಾಡಬೇಕೆಂಬುದಾಗಿರುತ್ತದೆ.

21. ಅದೇರೀತಿ ಈ ದಾವೆಯಲ್ಲಿ ಪ್ರತಿವಾದಿಗಳ ಪ್ರತಿವಾದ ಏನೆಂದರೆ, ಪ್ರತಿವಾದಿಗಳ ತಂದೆ ಕಳಕಪ್ಪ ಇತನು ದಾವಾ ಆಸ್ತಿಯ ಮಾಲೀಕರಾದ

ವೀರಭದ್ರಪ್ಪ ತಂದೆ ಸಂಗಪ್ಪ ಮುರಗಿ ಇವರಿಗೆ ತಿಳಿಯದ ಹಾಗೇ ದಿನಾಂಕಃ 13.05.1955 ರಿಂದ ವಿರುದ್ಧ ಮಾಲ್ಕೀ ನಾತೆಯಿಂದ ಸ್ವಾಧೀನದಲ್ಲಿ ಇದ್ದು, ಈ ಸಂಗತಿಯು ವೀರಭದ್ರಪ್ಪ ಸಂಗಪ್ಪ ಮುರಗಿ ಮತ್ತು ಆತನ ಹೆಂಡತಿ ಮತ್ತು ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಸುಮಾರು 12 ವರ್ಷಗಳಿಂದ ಮೇಲ್ಪಟ್ಟು ಗೊತ್ತಿರುತ್ತದೆ. ವೀರಭದ್ರಪ್ಪರವರ ಮರಣಾನಂತರ ವಾದಿಯರಿಗೆ ಹಾಗೂ ಸಾರ್ವಜನಿಕರಿಗೆ ತಿಳಿಯುವಂತೆ ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳ ತಂದೆ ವಿರುದ್ಧ ಮಾಲ್ಕೀ ನಾತೆಯಿಂದ ಯಾವುದೇ ಅಡ್ಡಿ ಆತಂಕ ಇಲ್ಲದೆ ಬಿತ್ತಿ ಬೆಳೆಯುತ್ತಾ ಬಂದಿದ್ದು ಅದನ್ನು ಅಭಿವೃದ್ಧಿಗೊಳಿಸಿ ಬೆಲೆ ಬಾಳುವ ಆಸ್ತಿಯನ್ನಾಗಿ ಮಾಡಿದ್ದು ಇರುತ್ತದೆ. ಆದ್ದರಿಂದ ಎದುರು ದಾವೆಯಲ್ಲಿ ಕೋರಿಕೊಂಡಿರುವಂತೆ ದಾವೆಯನ್ನು ಡಿಕ್ರಿ ಮಾಡಬೇಕೆಂಬುದಾಗಿರುತ್ತದೆ.

22. ದಾವೆಯ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ ಈ ದಾವೆಯ 1ನೇ ವಾದಿಯು ಸ್ವತಃ ಪಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಗಾಗಿ ನ್ಯಾಯಾಲಯದ ಮುಂದೆ ನಿಪಿ.1 ರಿಂದ 5 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ತಮ್ಮ ಸಾಕ್ಷ್ಯದಲ್ಲಿ ವಾದಪತ್ರದ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ.

23. 1ನೇ ವಾದಿಗೆ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿದ್ದು ಪಾಟೀ ಸವಾಲಿನಲ್ಲಿ ಕಳಕಪ್ಪ ಮುರಗಿ ಇವರ ಹೆಸರು ದಾವಾ ಆಸ್ತಿಗಳ ಉತಾರದಲ್ಲಿ ಯಾವ ವರ್ಷದಿಂದ ದಾಖಲೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ಸನ್ 1988 ರಲ್ಲಿ ಕಳಕಪ್ಪ ಇವನ ಹೆಸರು ದಾವಾ ಆಸ್ತಿ ಉತಾರದಲ್ಲಿ ದಾಖಲಾಗಿರುತ್ತದೆಂದರೆ ಸರಿಯಲ್ಲ. ನನ್ನ ಗಂಡ ಪೌತಿ ಆದ ನಂತರ ದಾವಾ ಆಸ್ತಿ ಉತಾರದಲ್ಲಿ ಕಳಕಪ್ಪರವರ ಹೆಸರು ದಾಖಲಾದ ಬಗ್ಗೆ ನನಗೆ ತಿಳಿದಿರುತ್ತದೆ ದಾವಾ ಆಸ್ತಿ ಉತಾರದಲ್ಲಿ ಕಳಕಪ್ಪನ ಹೆಸರು ದಾಖಲಾದ ಬಗ್ಗೆ ನನ್ನ ಅಜ್ಜ ವೀರಭದ್ರಪ್ಪ, ನನ್ನ ಗಂಡನಿಗೆ ಮತ್ತು ನನಗೆ ಮೊದಲಿನಿಂದಲೂ ಅಂದರೆ 1988 ರಿಂದಲೂ ತಿಳಿದಿತ್ತು ಅಂದರೆ ಸರಿಯಲ್ಲ. ನನ್ನ ಗಂಡ ಮತ್ತು ನಾನು ಕಳಕಪ್ಪ ಇವರ ಹೆಸರು ತಪ್ಪಾಗಿ ನಮೂದು ಆಗಿರುತ್ತದೆ ಅಂತಾ

ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ. ದಾವಾ ಆಸ್ತಿಯಲ್ಲಿ ನಾವೇ ಉಳುಮೆ ಮಾಡುತ್ತೇವೆ ಮತ್ತು ಅದರ ಬೆಳೆಯನ್ನು ನಾವೇ ಪಡೆದುಕೊಳ್ಳುತ್ತೇವೆ. ಸನ್ 2019 ರಲ್ಲಿ ದಾವಾ ಆಸ್ತಿಯಲ್ಲಿ ಹೆಸರನ್ನು ಬಿತ್ತಿದ್ದೇವು ದಾವಾ ಆಸ್ತಿಯಲ್ಲಿ ಬೆಳೆಯನ್ನು ತೆಗೆದುಕೊಂಡಿರುತ್ತೇವೆ. ದಾವಾ ಆಸ್ತಿಯಲ್ಲಿ ಬೆಳೆಯನ್ನು ಬಿತ್ತಿರುತ್ತೇವೆ ಆದರೆ ಸರಿಯಾಗಿ ಮಳೆ ಆಗದೇ ಇರುವ ಕಾರಣಕ್ಕಾಗಿ ನಾವು ಬೆಳೆಯನ್ನು ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ನನ್ನ ಜೀವಿತಾವಧಿಯಲ್ಲಿ ದಾವಾ ಆಸ್ತಿಯಿಂದ ಯಾವುದೇ ಬೆಳೆಯನ್ನು ತೆಗೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು, ನನ್ನ ಗಂಡ ಬೇರೆಯವರಿಗೆ ಜಮೀನನ್ನು ಲಾವಣಿಗೆ ಕೊಟ್ಟು ಬರುತ್ತಿದ್ದರು ಅಂತಾ ನುಡಿಯುತ್ತಾರೆ. ನನ್ನ ಗಂಡ ಯಾವ ಯಾವ ವರ್ಷದಲ್ಲಿ ಯಾರು ಯಾರಿಗೆ ದಾವಾ ಆಸ್ತಿಯನ್ನು ಲಾವಣಿ ಕೊಟ್ಟಿದ್ದ ಅಂತಾ ಹೇಳಲು ಬರುವುದಿಲ್ಲ. ಸದರಿ ಲಾವಣಿ ಕೊಟ್ಟ ಬಗ್ಗೆ ಕಾಗದ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯಲ್ಲಿ ನಾವೇ ಸ್ವಾಧೀನಾನುಭವದಲ್ಲಿರುತ್ತೇವೆ ಅಂತಾ ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಪ್ರತಿವಾದಿ ನಮ್ಮ ಸ್ವಾಧೀನಕ್ಕೆ ಯಾವ ದಿನಾಂಕದಂದು ತಂಟೇ ತಕರಾರು ಮಾಡಿದ ಎಂದು ಹೇಳಲು ಬರುವುದಿಲ್ಲ. ನನ್ನ ಅಜ್ಜ ಕೊತಬಾಳದಲ್ಲಿ ಹೋದ ನಂತರ ದಾವಾ ಆಸ್ತಿಯನ್ನು ಕಳಕಪ್ಪ ಇವನು ಅಭಿವೃದ್ದಿಪಡಿಸಿರುತ್ತಾನೆ ಅಂದರೆ ಸರಿ. ಸನ್ 1988 ರಲ್ಲಿ ಕಳಕಪ್ಪ ಇತನ ಹೆಸರು ದಾವಾ ಆಸ್ತಿಗೆ ದಾಖಲಾದ ವಿಷಯ ನನ್ನ ಗಂಡನಿಗೆ ಗೊತ್ತಾಯಿತು ಅಂದರೆ ನನಗೆ ಗೊತ್ತಿಲ್ಲ. ಡ.ನಂಬರಃ 853 ನ್ನು ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು, ನನಗೆ ಗೊತ್ತು ಇರಲಿಲ್ಲ ಅಂತಾ ನುಡಿಯುತ್ತಾರೆ. ದಾವಾ ಆಸ್ತಿ 2018 ರಲ್ಲಿ ಪ್ರತಿ ಎಕರೆಗೆ 5-6 ಲಕ್ಷ ಬೆಲೆಬಾಳಬಹುದು ಎಂದು ಸಾಕ್ಷ್ಯ ನುಡಿದಿರುತ್ತಾರೆ.

24. ಈ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ 4 ನೇ ಪ್ರತಿವಾದಿಯು ಸ್ವತಃ ಡಿ.ಡಬ್ಲ್ಯೂ.1 ಎಂದು ವಿಚಾರಣೆಗೊಳಗಾಗಿ ತಮ್ಮ ಸಾಕ್ಷ್ಯದಲ್ಲಿ ಲಿಖಿತ ತಕರಾರಿನ ಸಂಗತಿಗಳನ್ನು ಪುನರುಚ್ಚರಿಸುವ ಮುಖಾಂತರ ನ್ಯಾಯಾಲಯದ

ಮುಂದೆ ನಿಡಿ.1 ಮತ್ತು 2 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ.

25. ಈ ದಾವೆಯಲ್ಲಿ ವಿಚಾರಣೆಗೊಳಗಾಗಿರುವ 4ನೇ ಪ್ರತಿವಾದಿಗೆ ವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತಮ್ಮ ಪಾಟೀ ಸವಾಲಿನಲ್ಲಿ ನನ್ನ ಅಜ್ಜನ ಹೆಸರು ಸಂಗಪ್ಪ ನನ್ನ ಅಜ್ಜಿಯ ಹೆಸರು ಪ್ರಭಮ್ಮ. ನನ್ನ ತಂದೆ ಮೂರು ಜನ ಅಣ್ಣತಮ್ಮಂದಿರು. ಸಂಗಪ್ಪ ಮತ್ತು ಪ್ರಭಮ್ಮ ಇವರಿಗೆ 3 ಜನ ಮಕ್ಕಳು 1. ಅಂದಾನಪ್ಪ, 2. ವೀರಭದ್ರಪ್ಪ, 3. ಕಳಕಪ್ಪ ನಮ್ಮ ತಾಯಿಯ ಹೆಸರು ಅಂದಮ್ಮ ಅವರ ತವರು ಮನೆ ಚಿಕ್ಕಮಣ್ಣೂರು. ನಮ್ಮ ದೊಡ್ಡಪ್ಪ ವೀರಭದ್ರಪ್ಪ ಇವರ ಹೆಂಡತಿಯ ಹೆಸರು ಶಾವಮ್ಮ. ವೀರಭದ್ರಪ್ಪ ಇವರ ಹೆಂಡತಿಯ ತವರು ಮನೆ ಕೊತಬಾಳ ಆಕೆಗೆ ಹೆಣ್ಣಾಸ್ತಿ ಇತ್ತು. ಅದರ ವಿಸ್ತೀರ್ಣ ಮತ್ತು ಸರ್ವೇ ನಂಬರ ಗೊತ್ತಿಲ್ಲ. ನನ್ನ ಅಜ್ಜ ಸಂಗಪ್ಪನ ಮನೆತನಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತು.1. 5 ಎಕರೆ 5 ಗುಂಟೆ, 2. 3 ಎಕರೆ 37 ಗುಂಟೆ, 3. 5 ಎಕರೆ 2 ಗುಂಟೆ, 4. 1 ಎಕರೆ 5 ಗುಂಟೆ ಆಸ್ತಿಗಳು ಇದ್ದವು. 3 ಎಕರೆ 37 ಗುಂಟೆ ಆಸ್ತಿ ನಮ್ಮ ದೊಡ್ಡಪ್ಪ ವೀರಭದ್ರಪ್ಪ ಇವರ ಪಾಲಿಗೆ ಬಂದಿತ್ತು. ಅಬ್ಬಿಗೇರಿ ಗ್ರಾಮದಲ್ಲಿರುವ 5 ಎಕರೆ 5 ಗುಂಟೆ ನನ್ನ ತಂದೆ ಕಳಕಪ್ಪ ಇವರ ಪಾಲಿಗೆ ಬಂದಿದ್ದು, ಸವಡಿ ಗ್ರಾಮದಲ್ಲಿರುವ 5 ಎಕರೆ 2 ಗುಂಟೆ ಅಂದಾನಪ್ಪ ಮುರಗಿ ಇವರ ಪಾಲಿಗೆ ಬಂದಿದ್ದು, ಸವಡಿ ಗ್ರಾಮದಲ್ಲಿ ಇರುವ 1 ಎಕರೆ 5 ಗುಂಟೆ ನನ್ನ ಅಜ್ಜ ಸಂಗಪ್ಪನ ಪಾಲಿಗೆ ಬಂದಿದ್ದು. ನನ್ನ ಅಜ್ಜ ಸಂಗಪ್ಪ ಯಾವಾಗ ತೀರಿಕೊಂಡ ಎಂದು ಹೇಳಲು ಬರುವುದಿಲ್ಲ. ಸವಡಿ ಗ್ರಾಮದಲ್ಲಿ ಇರುವ ಮನೆ ನನ್ನ ತಂದೆ ಕಳಕಪ್ಪ ಇವರ ಹೆಸರಿನಲ್ಲಿ ಇದೆ. ಸದರಿ ಮನೆ ಎಲ್ಲರ ನಡುವೆ ಇದೆ, ಅದು ಇನ್ನು ಪಾಲು ಆಗಿಲ್ಲ ಎಂದರೆ ಸಾಕ್ಷಿ ಪಾಲು ಆಗಿ ನನ್ನ ತಂದೆಯ ಹಿಸ್ಸೆಗೆ ಬಂದಿದೆ ಎಂದು ಹೇಳುತ್ತಾರೆ.

26. ಈ ಸಾಕ್ಷಿದಾರರು ತನ್ನ ಪಾಟೀ ಸವಾಲಿನಲ್ಲಿ ಮುಂದುವರೆದು, ವಾದಿಯರು ಇದೇ ನ್ಯಾಯಾಲಯದಲ್ಲಿ ನಮ್ಮ ಮತ್ತು ದೊಡ್ಡಪ್ಪನಾದ ಅಂದಾನಪ್ಪ ಇವರ ಮಕ್ಕಳ ವಿರುದ್ಧ ಅಸಲು ದಾವಾ ಸಂಖ್ಯೆ.98/2019 ರಂತೆ

ಪಾಲು ವಿಭಾಗಕ್ಕಾಗಿ ದಾವೆ ಮಾಡಿದ್ದರು ಎಂದರೆ ನಿಜ. ಸದರಿ ದಾವೆಯಲ್ಲಿ ನಾವು ಹಾಜರಾಗಿದ್ದೇವೆ ಎಂದರೆ ನಿಜ. ನಮಗೆ ಗೊತ್ತಾಗದೇ ಡಿಕ್ರಿಯಾಗಿದೆ ಎಂದು ಹೇಳುತ್ತಾರೆ. ನಾವು ಕಾಡದೇವರಮಠ ವಕೀಲರನ್ನು ನೇಮಕ ಮಾಡಿದ್ದೇವು. ಸವಡಿ ಗ್ರಾಮದ ರಿ.ಸ.ನಂಬರಃ 679/5 ರಲ್ಲಿಯ ವಿಸ್ತೀರ್ಣ 1 ಎಕರೆ 5 ಗುಂಟೆ ಆಸ್ತಿಯನ್ನು ಆ ದಾವೆಯಲ್ಲಿ ದಾವಾ ಆಸ್ತಿ ಇದ್ದು, ನಾವು ಆ ದಾವೆಯಲ್ಲಿ ಪಕ್ಷಗಾರರು ಇದ್ದರು ಸಹ ನಾವು ಪಾಟೀ ಸವಾಲು ಮಾಡಿಲ್ಲಾ ಎಂದರೆ ಸರಿಯಲ್ಲ. ನಮಗೆ ಗೊತ್ತಾಗದೇ ಡಿಕ್ರಿಯಾಗಿದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿ ಆದ ನಂತರ ಎಫ್.ಡಿ.ಪಿ ನಂಬರಃ 26/2023 ರಂತೆ ಎಲ್ಲರಿಗೂ ನೋಟೀಸ್ ಕೊಟ್ಟಿದ್ದಾರೆ ಎಂದರೆ ನಿಜ. ಓ.ಎಸ್.ನಂಬರಃ 98/2019 ರಲ್ಲಿ 1133 ಮನೆ ಹಾಗೂ 1 ಎಕರೆ 5 ಗುಂಟೆ ಜಮೀನು ದಾವಾ ಆಸ್ತಿ ಇತ್ತು. ಪಾಲುವಾಟ್ನಿಯಲ್ಲಿ ಆದ ನಂತರ ನನ್ನ ತಂದಗೆ 5 ಎಕರೆ 5 ಗುಂಟೆ ಬಂದಿತ್ತು. 5 ಎಕರೆ 5 ಗುಂಟೆ ಕಬ್ಜಾ ನಾವೇ ಇದ್ದೇವೆ ಎಂದರೆ ನಿಜ. ಓ.ಎಸ್ .ನಂಬರಃ 98/2019 ರಲ್ಲಿ ಸಂಗಪ್ಪ ಶಿವಪ್ಪ ಎಂಬುವವರು ತಮ್ಮ ಹೆಸರಿನಲ್ಲಿ ಕಾನೂನುಬಾಹಿರವಾಗಿ ತಮ್ಮ ಹೆಸರನ್ನು ಹಚ್ಚಿಕೊಂಡಿದ್ದರಿಂದ ಆ ದಾವೆ ಹಾಕಲಾಗಿತ್ತು ಎಂದರೆ ನಿಜ.

27. ಈ ಸಾಕ್ಷಿದಾರರು ತಮ್ಮ ಪಾಟೀ ಸವಾಲಿನಲ್ಲಿ ಮುಂದುವರೆದು, ಕೊತಬಾಳ ಗ್ರಾಮದ ರಿ.ಸ.ನಂಬರಃ 238/1, 238/3 ಎರಡು ಆಸ್ತಿ ಇತ್ತು. ಆ ಆಸ್ತಿಗಳು ಶಾವಮ್ಮರವರ ತವರು ಮನೆ ಆಸ್ತಿಗಳು ಎಂದರೆ ನಿಜ. ಶಾವಮ್ಮ ಇವರ ತವರು ಮನೆ ಆಸ್ತಿಗಳ ಬಗ್ಗೆ ನಮ್ಮದು ಯಾವುದೇ ತಕರಾರು ಇಲ್ಲಾ ಎಂದರೆ ನಿಜ. ನನ್ನ ತಂದೆ ಕಳಕಪ್ಪ ಕಾನೂನುಬಾಹಿರವಾಗಿ ಒಂದು ವಾಟ್ನಿ ಪತ್ರವನ್ನು ಸೃಷ್ಟಿ ಮಾಡಿ, ನನ್ನ ಮತ್ತು ತಿಪ್ಪಣ್ಣ ನಡುವೆ ವಾಟ್ನಿಯಾಗಿದೆ ಎಂದು ಸುಳ್ಳು ತೋರಿಸಿ ಒಂದು ಪತ್ರವನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಒಂದು ಅರ್ಜಿ ಬರೆದು ವಾಟ್ನಿ ಮಾಡಿದರು, ನನ್ನ ತಂದೆಯ ಹೆಸರಿನಲ್ಲಿ ಖಾತೆ ಆಗಿತ್ತು ಎಂದು ಹೇಳುತ್ತಾರೆ. ತಿಪ್ಪಣ್ಣ ತನ್ನ ತಾಯಿಯ ಆಸ್ತಿ ಇದ್ದಂತಹ ಕೊತಬಾಳ ಗ್ರಾಮದಲ್ಲಿ ವಾಸವಿದ್ದು, ಸವಡಿ ಗ್ರಾಮಕ್ಕೆ ದಾವಾ ಆಸ್ತಿಯನ್ನು

ಸಾಗುವಳಿ ಮಾಡಲು ಬರುತ್ತಿದ್ದ ಎಂದರೆ ಸರಿಯಲ್ಲ. ಆದರೆ ಸವಡಿ ಗ್ರಾಮದ ನನ್ನ ಅಜ್ಜ ಸಂಗಪ್ಪ ಇವರ ಪಾಲಿಗೆ ಬಂದಂತಹ 1 ಎಕರೆ 5 ಗುಂಟೆ ಜಮೀನನ್ನು ಸಾಗುವಳಿ ಮಾಡಲು ಬರುತ್ತಿದ್ದರು ಎಂದು ಹೇಳುತ್ತಾರೆ. ಸದರಿ ಜಮೀನನ್ನು 1 ವರ್ಷ ಅಂದಾನಪ್ಪ ಸಂಗಪ್ಪ ಮುರಗಿ ಮತ್ತು ಮತ್ತೊಂದು ವರ್ಷ ವೀರಭದ್ರಪ್ಪ ಸಂಗಪ್ಪ ಮುರಗಿ ಮಾಡುತ್ತಿದ್ದರು. ನಾನು ಮೊದಲು ಸವಡಿಯಲ್ಲಿ ಇದ್ದೆ. ಈಗ 6 ವರ್ಷಗಳಿಂದ ಗದಗನಲ್ಲಿ ವಾಸವಾಗಿದ್ದೇನೆ. ನನ್ನ ಅಣ್ಣ ವೀರಪ್ಪ ಕಳಕಪ್ಪ ಮುರಗಿ ಇವರು 10 ವರ್ಷಗಳಿಂದ ಗದಗನಲ್ಲಿ ವಾಸವಾಗಿದ್ದಾರೆ. ನನ್ನ ತಂದೆ ಬದುಕಿದ್ದಾಗ ಸವಡಿಯಲ್ಲಿ ಇರುತ್ತಿದ್ದರು. ದಾವಾ ಆಸ್ತಿಯನ್ನು 1 ನೇ ವಾದಿಯ ಗಂಡ ಜೀವಂತವಾಗಿರುವವರೆಗೂ ಅವರೇ ಮಾಡುತ್ತಿದ್ದರು, ಅವರು ಸತ್ತ ನಂತರ ಅನ್ನಕ್ಕ ಇವರು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿ ನಾವೇ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ಹೇಳುತ್ತಾರೆ. ತಿಪ್ಪಣ್ಣನ ತಾಯಿ ಶಾವಮ್ಮ ಇವರಿಗೆ ಹೆಣ್ಣಾಸ್ತಿ ಇದ್ದ ಕಾರಣ ನನ್ನ ತಂದೆ ದಾವಾ ಆಸ್ತಿಯನ್ನು ದುರುದ್ದೇಶದಿಂದ ತಿಪ್ಪಣ್ಣನಿಗೆ ಗೊತ್ತಾಗದಂತೆ ತನ್ನ ಹೆಸರಿಗೆ ಮ್ಯುಟೇಶನ್ ಮಾಡಿಸಿದ್ದಾನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

28. ವಾದಿಗಳ ದಾವೆಯ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ ನ್ಯಾಯಾಲಯದ ಮುಂದೆ ನಿಪಿ.1 ಡ.ನಂಬರಃ 7537 ರಂತೆ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗ ದಿನಾಂಕಃ 08.07.1958 ರಂದು ಸಂಗಪ್ಪ ಪ್ರಭಪ್ಪ ಮುರಗಿರವರ ಗಂಡು ಮಕ್ಕಳಾದ 1.ಅಂದಾನಪ್ಪ, 2. ವೀರಭದ್ರಪ್ಪ, 3. ಕಳಕಪ್ಪ ಇವರುಗಳು ತಮ್ಮ ತಮ್ಮೊಳಗೆ ಕೂಡಿ ನಡೆಯದ್ದರಿಂದ ಸಂಗಪ್ಪ ಪ್ರಭಪ್ಪ ಮುರಗಿ ಇವರು ವಾಟ್ನಿ ಮಾಡಿಕೊಟ್ಟಿದ್ದು, ಸದರಿ ವಿಭಾಗದಲ್ಲಿ ದಾವಾ ಆಸ್ತಿಯಲ್ಲಿ ವೀರಭದ್ರಪ್ಪ ಸಂಗಪ್ಪ ಮುರಗಿ ಇವರ ಹಿಸ್ಸೆಗೆ ಬಂದಿರುವುದಾಗಿ ದಾಖಲೆಯಲ್ಲಿ ನಮೂದು ಇರುತ್ತದೆ. ನಿಪಿ.2 ದಾಖಲೆಯು ಡ.ನಂಬರಃ10488 ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕಃ 15.07.1982 ರಂದು ದಾವಾ

ಆಸ್ತಿಯನ್ನು ಶ್ರೀ ವೀರಭದ್ರಪ್ಪ ಸಂಗಪ್ಪ ಮುರಗಿ ಇವರು ಕೊತಬಾಳ ಗ್ರಾಮದಲ್ಲಿ ದಿನಾಂಕಃ 09.02.1980 ರಂದು ಮರಣಹೊಂದಿದ್ದು, ಆತನ ವಾರಸುದಾರನಾದ 1. ತಿಪ್ಪಣ್ಣ ವೀರಭದ್ರಪ್ಪ ಮುರಗಿ ಹೆಣ್ಣು ಮಕ್ಕಳು ಸಂಗವ್ವ ಕೋಂ ಹುಚ್ಚಪ್ಪ ಅಂಗಡಿ ಮತ್ತು ಮರಿತಂಗೆವ್ವ ಕೋಂ ರುದ್ರಪ್ಪ ಹುಣಸಿಮರದ ಅಂತಾ ಇದ್ದು, ತಿಪ್ಪಣ್ಣರರಿಗೆ ಹೆಂಡತಿ ಇರುವುದಿಲ್ಲ, ಆ ಪ್ರಕಾರ ಹೆಣ್ಣು ಮಕ್ಕಳು ತಮ್ಮ ಹೆಸರು ದಾಖಲಿಸಬಾರದು ಎಂದು ಕೊಟ್ಟ ಕಬೂಲಿ ವರದಿ ಪ್ರಕಾರ ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರನ್ನು ದಾಖಲಿಸಿಲ್ಲವೆಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ.

29. ವಾದಿಗಳು ಹಾಜರುಪಡಿಸಿರುವ ನಿಪಿ.3 ದಾಖಲೆಯು ಡ.853 ರ ದೃಢೀಕೃತ ನಕಲು ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕಃ 28.09.1998 ರಂದು ತಿಪ್ಪಣ್ಣ ವೀರಭದ್ರಪ್ಪ ಮುರಗಿ ಹಾಗೂ ಅವರ ಚಿಕ್ಕಪ್ಪನಾದ ಕಳಕಪ್ಪ ನಾಗಪ್ಪ ಮುರಗಿ ಇವರುಗಳು ಕೂಡಿ ನಡೆಯದೆ ಇದ್ದುದರಿಂದ ಊರಿನ ಗುರು ಹಿರಿಯರ ಸಮಕ್ಷಮ ಹಿಸ್ಸಾ ಮಾಡಿಕೊಂಡಿದ್ದು, ಸದರಿ ಹಿಸ್ಸಾದಲ್ಲಿ ಕಳಕಪ್ಪ ಸಂಗಪ್ಪ ಮುರಗಿ ಇವರ ಹಿಸ್ಸೆಗೆ ಬಂದಿರುತ್ತದೆ. ತಿಪ್ಪಣ್ಣ ವೀರಭದ್ರಪ್ಪ ಮುರಗಿ ಇವರಿಗೆ ಕೊತಬಾಳ ಜಮೀನು ಬಂದಿರುತ್ತದೆ. ಆ ಪ್ರಕಾರ ದಾಖಲಿಸಲಾಗಿತ್ತು ಎಂದು ನಮೂದು ಇರುತ್ತದೆ. ನಿಪಿ.4 ದಾವಾ ಆಸ್ತಿಯ ಪಹಣಿ ಪತ್ರಿಕೆ ಇದ್ದು, 1996-1997 ಮತ್ತು 1997-1998 ನ್ನು ಇಸ್ವಿಗೆ ಸಂಬಂಧಪಟ್ಟಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಾವಾ ಆಸ್ತಿಯು ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರಿನಲ್ಲಿ ಇದ್ದು, ನಂತರ ಡ.ನಂಬರಃ 853 ಆದ ನಂತರ ಕಳಕಪ್ಪ ಸಂಗಪ್ಪ ಮುರಗಿ ಇವರ ಹೆಸರಿಗೆ ಖಾತೆಯಾಗಿರುತ್ತದೆಂದು ಕಂಡು ಬಂದಿರುತ್ತದೆ. ನಿಪಿ.5 ಈ ದಾವೆಯನ್ನು ದಾಖಲಿಸುವ ವರ್ಷದ ಪಹಣಿ ಪತ್ರಿಕೆ ಇದ್ದು, ಅದರಲ್ಲಿಯೂ ಸಹಾ ಕಳಕಪ್ಪ ಸಂಗಪ್ಪ ಮುರಗಿರವರ ಹೆಸರು ನಮೂದು ಇರುತ್ತದೆಂದು ಕಂಡು ಬಂದಿರುತ್ತದೆ.

30. ಈ ದಾವೆಯಲ್ಲಿ ಪ್ರತಿವಾದಿಗಳು ಹಾಜರುಪಡಿಸಿರುವ ನಿಡಿ.1 ದಾಖಲೆಯು ಡ.ನಂಬರಃ 853 ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಿನಾಂಕಃ 28.09.1998 ನೇ ಇಸ್ವಿಯಲ್ಲಿ ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರಿನಲ್ಲಿ ಇದ್ದ ಜಮೀನನ್ನು ಅವರ ಚಿಕ್ಕಪ್ಪನಾದ ಪ್ರತಿವಾದಿಗಳ ತಂದೆ ಕಳಕಪ್ಪ ಸಂಗಪ್ಪ ಮುರಗಿ ಇವರುಗಳು ಕೂಡಿ ನಡೆಯಲು ಆಗದೆ ಇದ್ದುದರಿಂದ ದಾವಾ ಆಸ್ತಿಯನ್ನು ಕಳಕಪ್ಪ ಸಂಗಪ್ಪ ಮುರಗಿರವರಿಗೆ ಕೊತಬಾಳದಲ್ಲಿನ ಜಮೀನನ್ನು ತಿಪ್ಪಣ್ಣ ವೀರಭದ್ರಪ್ಪ ಮುರಗಿ ಇವರಿಗೆ ನೀಡಲಾಗಿರುತ್ತದೆಂದು ಈ ದಾಖಲೆಯಿಂದ ಕಂಡು ಬಂದಿರುತ್ತದೆ. ನಿಡಿ.2 1997-1998 ರ ಪಹಣಿ ಪತ್ರಿಕೆ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಮೂಲತಃ ಈ ಆಸ್ತಿಯು ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರಿನಲ್ಲಿ ಡ.ನಂಬರಃ 10488 ರಂತೆ ದಾಖಲು ಆಗಿದ್ದು, ನಂತರ ಡ.ನಂಬರಃ 853 ರಂತೆ ತಿಪ್ಪಣ್ಣ ವೀರಭದ್ರಪ್ಪ ಮುರಗಿ ಹಾಗೂ ಆತನ ಚಿಕ್ಕಪ್ಪ ಕಳಕಪ್ಪ ಸಂಗಪ್ಪ ಮುರಗಿ ಇವರುಗಳು ಮಾಡಿಕೊಂಡ ಪಾಲು ವಾಟ್ನಿಯಂತೆ ಕಳಕಪ್ಪ ಸಂಗಪ್ಪ ಮುರಗಿ ಇವರ ಹೆಸರು ದಾವಾ ಆಸ್ತಿಗಳ ಉತಾರದಲ್ಲಿ ದಾಖಲಾಗಿರುತ್ತದೆಂದು ಕಂಡು ಬಂದಿರುತ್ತದೆ.

31. ಈ ಮೇಲಿನ ವಾದಿಗಳು ಹಾಗೂ ಪ್ರತಿವಾದಿಗಳ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯವನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ದಾವಾ ಆಸ್ತಿಯು ರೋಣ ತಾಲ್ಲೂಕು ಸವಡಿ ಗ್ರಾಮದ ರಿ.ಸ.ನಂಬರಃ 518/1 ರಲ್ಲಿಯ 3 ಎಕರೆ 37 ಗುಂಟೆ ಜಮೀನು ಇರುತ್ತದೆ. ವಾದಿಗಳ ಪ್ರಕಾರ ಸದರಿ ಆಸ್ತಿಯು ಮೂಲತಃ ಸಂಗಪ್ಪ ಪ್ರಭಪ್ಪ ಮುರಗಿ ಇವರಿಗೆ ಸೇರಿದ್ದು, ಅವರು ಜೀವಂತವಾಗಿದ್ದಾಗಲೇ 1958 ರಲ್ಲಿ ತನ್ನ 3 ಜನ ಗಂಡು ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದು, ಸದರಿ ವಿಭಾಗದಲ್ಲಿ ದಾವಾ ಆಸ್ತಿಯು ವೀರಭದ್ರಪ್ಪ @ ವೀರಪ್ಪ ಮುರಗಿರವರಿಗೆ ಎಂ.ಆರ್.ನಂಬರಃ7537 ರಂತೆ ದಿನಾಂಕಃ 05.09.1958 ರಂದು ಬಂದಿದ್ದು, ಆತನ ಮರಣಾನಂತರ ಸದರಿ ಆಸ್ತಿಗೆ ಆತನ ಒಬ್ಬನೇ ಮಗನಾದ ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರಿಗೆ ನಿಪಿ.2 ರಂತೆ ಖಾತೆ

ಆಗಿರುತ್ತದೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದರೆ ವಾದಿಗಳು ಈ ದಾವೆಯನ್ನು ನ್ಯಾಯಾಲಯದ ಮುಂದೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿರುವುದರಿಂದ ಯಾರು ದಾವೆಯನ್ನು ಘೋಷಣಾತ್ಮಕ ಆದೇಶ ಕೋರಿ ಸಲ್ಲಿಸಿರುತ್ತಾರೆಯೋ ಅವರೇ  ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ನ್ಯಾಯಾಲಯದ ಮುಂದೆ ರುಜುವಾತುಪಡಿಸಬೇಕೆ ಹೊರತು ಪ್ರತಿವಾದಿಗಳ ದುರ್ಬಲತೆಯನ್ನು ಅಸ್ತ್ರವನ್ನಾಗಿ ಮಾಡಿಕೊಂಡು ನ್ಯಾಯಾಲಯದಿಂದ ಡಿಕ್ರಿಯನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

32. ಈ ದಾವೆಯಲ್ಲಿ ಪ್ರತಿವಾದಿಗಳು ನಿಪಿ.3 ಮತ್ತು ನಿಡಿ.1 ದಾಖಲೆಯಂತೆ ತಿಪ್ಪಣ್ಣ ವೀರಭದ್ರಪ್ಪ ಮುರಗಿ ಮತ್ತು ಪ್ರತಿವಾದಿಗಳ ತಂದೆ ಕಳಕಪ್ಪ ಸಂಗಪ್ಪ ಮುರಗಿ ಇವರುಗಳು 1998 ರಲ್ಲಿ ಮಾಡಿಕೊಂಡ ಪಾಲು ವಿಭಾಗದಲ್ಲಿ ದಾವಾ ಆಸ್ತಿಯು ಕಳಕಪ್ಪ ಸಂಗಪ್ಪ ಮುರಗಿರವರಿಗೆ ಬಂದಿರುತ್ತದೆ, ಕೊತಬಾಳದಲ್ಲಿ ಇರುವ ಆಸ್ತಿಯು ತಿಪ್ಪಣ್ಣ ವೀರಭದ್ರಪ್ಪ ಮುರಗಿರವರಿಗೆ ಬಂದಿರುತ್ತದೆ.  ಆ ಪ್ರಕಾರ 1998 ರಿಂದಲೂ ಕಳಕಪ್ಪ ಸಂಗಪ್ಪ ಮುರಗಿರವರಿಗೆ ದಾವಾ ಆಸ್ತಿಯ ಖಾತೆಯು ಬದಲಾವಣೆ ಆಗಿದ್ದು, ಆ ಪ್ರಕಾರ ಈ ದಾವೆಯಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯತ ಸ್ವಾಧೀನಾನುಭವದಲ್ಲಿ ಇರುತ್ತಾರೆ. ಸದರಿ ಪ್ರತಿವಾದಿಗಳು ವಿರುದ್ದ ಮಾಲ್ಕೀ ನಾತೆಯಿಂದ 1998 ರಿಂದ ಅಂದರೆ 12 ವರ್ಷಗಳಿಂದ ಮೇಲ್ಪಟ್ಟು ಸದರಿ ದಾವಾ ಆಸ್ತಿಯಲ್ಲಿ ವಾದಿಗಳ ಗಮನಕ್ಕೆ ಹಾಗೂ ಸಾರ್ವಜನಿಕರ ಗಮನಕ್ಕೆ ಇತ್ತು, ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆಂದು ಪ್ರತಿವಾದವನ್ನು ತೆಗೆದುಕೊಂಡಿರುತ್ತಾರೆ. ಈ ಹಂತದಲ್ಲಿ ನ್ಯಾಯಾಲಯವು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 6(ಎ) ಯನ್ನು ಪರಿಶೀಲಿಸಲಾಗಿ ಎದುರು ದಾವೆ ಎಂದು ಯಾರು ಮಾಡಿರುತ್ತಾರೆಯೋ ಸದರಿ ಎದುರು ದಾವೆಯು ವಾದಪತ್ರದಲ್ಲಿ ತಿಳಿಸಿದ ಸಂಗತಿಗಳಂತೆ ಎಲ್ಲಾ ಸಂಗತಿಗಳನ್ನು ರುಜುವಾತುಪಡಿಸಬೇಕಾಗಿರುತ್ತದೆ. ಈ ದಾವೆಯಲ್ಲಿ

ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಸಂಗತಿಗಳನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ಪ್ರತಿವಾದ ಪತ್ರದ ಪ್ಯಾರಾ ನಂಬರಃ12 ರಲ್ಲಿ ವಾದಿಗಳು ದಾವಾ ಆಸ್ತಿಯ ಕುರಿತು ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿದ್ದರಿಂದ ಪ್ರತಿವಾದಿಗಳು ಎದುರು ದಾವೆಯನ್ನು ಮಾಡಲು ಕಾರಣ ಉಂಟಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಸದರಿ ಪ್ರತಿವಾದಿಗಳು ಯಾವ ದಿನಾಂಕದಂದು ವಾದಿಗಳ ವಿರುದ್ಧ ವ್ಯಾಜ್ಯ ಕಾರಣ ಉಂಟಾಗಿರುತ್ತದೆಂದು ಎಲ್ಲಿಯೂ ಸಹಾ ತಿಳಿಸಿರುವುದಿಲ್ಲ. ಪ್ರತಿವಾದ ಪತ್ರವನ್ನು ಪರಿಶೀಲಿಸಿದಾಗ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ವಾದಿಗಳ ವಿರುದ್ಧ ಎದುರು ದಾವೆಯನ್ನು ಮಾಡಿದ್ದು, K.C.F and SV Act ಕಾಯ್ದೆ ಕಲಂ 24(D) ಮತ್ತು 26(C) ರಡಿಯಲ್ಲಿ ನ್ಯಾಯಾಲಯದ ಶುಲ್ಕವನ್ನು ಲೆಕ್ಕಾಚಾರ ಮಾಡಿ ದಿನಾಂಕಃ 25.11.2025 ರಂದು ರೂ.50/- ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುತ್ತಾರೆ.

33. ಈ ದಾವೆಯಲ್ಲಿ ವಾದಿಗಳ ಪರವಾಗಿ ವಿಚಾರಣೆಗೊಳಗಾಗಿರುವ 1 ನೇ ವಾದಿಯು ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವ ಸಂಗತಿಗಳನ್ನು ಗಮನಿಸಿದಾಗ ದಾವಾ ಆಸ್ತಿಯಲ್ಲಿ ವಾದಿಗಳೇ ಉಳುಮೆ ಮಾಡುತ್ತಿದ್ದು ಬಂದ ಬೆಳೆಯನ್ನು ವಾದಿಗಳೇ ಪಡೆದುಕೊಳ್ಳುತ್ತಿದ್ದೇವೆಂದು ಸಾಕ್ಷಿ ನುಡಿದಿದ್ದು, ಆ ಬಗ್ಗೆ ವಾದಿಗಳು ನ್ಯಾಯಾಲಯ ಪರಿಗಣಿಸಬಹುದಾದಂತಹ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇರೀತಿ 1 ನೇ ವಾದಿಯು ತನ್ನ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಯನ್ನು ತನ್ನ ಗಂಡ ಲಾವಣಿಗೆ ಕೊಟ್ಟಿದ್ದರೆಂದು ತಿಳಿಸಿದ್ದು, ಅವರು ಆ ವಿಷಯಕ್ಕೆ ಸಂಬಂಧಪಟ್ಟಂತೆ ನುಡಿದಿರುವ ಸಾಕ್ಷ್ಯವನ್ನು ಗಮನಿಸಿದಾಗ ಪಿ.ಡಬ್ಲ್ಯೂ.1 ರವರ ಗಂಡ ಲಾವಣಿಗೆ ಯಾರಿಗೆ ಕೊಟ್ಟಿದ್ದರು ಎಂದು ಈ ವಾದಿಗೆ ಯಾವುದೇ ಮಾಹಿತಿ ಇರುವುದಿಲ್ಲ, ಮತ್ತು ತನ್ನ ಗಂಡನ ಮರಣಾನಂತರ ಸದರಿ ಆಸ್ತಿಯನ್ನು ಬಿಡಿಸಿಕೊಂಡು ಸ್ವಾಧೀನಾನುಭವದಲ್ಲಿ ಇರುವ ಬಗ್ಗೆಯೂ ಸಹಾ ಯಾವುದೇ ದಾಖಲೆಯನ್ನು

ಹಾಜರುಪಡಿಸಿರುವುದಿಲ್ಲ. ಅದೇರೀತಿ ವಾದಿಯು ಸ್ಪಷ್ಟವಾಗಿ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವೆಂದು ಒಪ್ಪಿಕೊಂಡಿರುವುದನ್ನು ಗಮನಿಸಿದಾಗ ಮೋಲ್ನೋಟಕ್ಕೆ ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುವುದಿಲ್ಲವೆಂದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

34. ಈ ದಾವೆಯಲ್ಲಿ ಪ್ರತಿವಾದಿಗಳು ವಾದಿಗಳ ವಿರುದ್ಧ, ವಿರುದ್ಧ ಮಾಲ್ಕೀ ನಾತೆಯಿಂದ ತಾವು ಸ್ವಾಧೀನಾನುಭವದಲ್ಲಿ ಇರುವುದಾಗಿ ಎದುರು ದಾವೆಯನ್ನು ಮಾಡಿದ್ದು, ಪ್ರತಿವಾದಿಗಳ ಪರವಾಗಿ ವಿಚಾರಣೆಗೊಳಗಾಗಿರುವ 4ನೇ ಪ್ರತಿವಾದಿಯು ತನ್ನ ಪಾಟೀ ಸವಾಲಿನ ಕಾಲಕ್ಕೆ ನುಡಿದಿರುವ ಸಾಕ್ಷ್ಯವನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇಲ್ಲದೆ ಇದ್ದುದರಿಂದ ಕಳಕಪ್ಪ ಸಂಗಪ್ಪ ಮುರಗಿ ಇವರು ದಾವಾ ಆಸ್ತಿಯಲ್ಲಿ ಅಭಿವೃದ್ಧಿಪಡಿಸಿರುತ್ತಾರೆಂದು ಕಂಡು ಬಂದಿರುತ್ತದೆ. ಆದರೆ ವಾದಿಯರು ಈ ಹಿಂದೆ ಅಸಲು ದಾವಾ ಸಂಖ್ಯೆ.98/2019 ರಂತೆ ದಾವಾ ಆಸ್ತಿಯನ್ನು ಒಳಗೊಂಡಂತೆ ಇತರ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಈ ದಾವೆಯ ದಾವಾ ಆಸ್ತಿಯು ಸಹಾ ಸೇರಿದ್ದು, ಆ ದಾವೆಯು ಡಿಕ್ರಿಯಾಗಿ ಸದರಿ ಪಾಲು ವಿಭಾಗದಲ್ಲಿ ಪ್ರತಿವಾದಿಗಳಿಗೆ 5 ಎಕರೆ 5 ಗುಂಟೆ ಜಮೀನು ಬಂದಿದ್ದು, ಆ ಪ್ರಕಾರ ಪ್ರತಿವಾದಿಗಳು ಸದರಿ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುವುದಾಗಿ ಒಪ್ಪಿಕೊಂಡಿರುವುದನ್ನು ಗಮನಿಸಿದಾಗ ಪ್ರತಿವಾದಿಗಳು ಈ ಆಸ್ತಿಯಲ್ಲಿ ಯಾವತ್ತೂ ಸಹಾ ಸ್ವಾಧೀನಾನುಭವದಲ್ಲಿ ಇರುವುದಿಲ್ಲವೆಂದು ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ.

35. ವಾದಿಗಳು ಹಾಜರುಪಡಿಸಿರುವ ನಿಪಿ.1 ರಿಂದ 3 ದಾಖಲೆಗಳನ್ನು ಗಮನಿಸಿದಾಗ 1958 ರಲ್ಲಿ ಮೂಲ ಪುರುಷ ಸಂಗಪ್ಪ ಪ್ರಭಪ್ಪ ಮುರಗಿರವರು ದಾವಾ ಆಸ್ತಿಯನ್ನು ಆತನ 3 ಜನ ಗಂಡು ಮಕ್ಕಳಿಗೆ ಹಂಚಿಕೆ

ಮಾಡಿಕೊಟ್ಟಿದ್ದು, ಸದರಿ ಪಾಲುವಾಟ್ನಿಯಲ್ಲಿ ದಾವಾ ಆಸ್ತಿಯನ್ನು ಆತನ 3ನೇ ಮಗ ವೀರಭದ್ರಪ್ಪ ಸಂಗಪ್ಪ ಮುರಗಿ ಇವರ ಹಿಸ್ಸೆಗೆ ನೀಡಿದ್ದು, ಆತನ ಮರಣಾನಂತರ ದಾವಾ ಆಸ್ತಿಯ ಖಾತೆಯು ಆತನ ಒಬ್ಬನೇ ಮಗನಾದ ತಿಪ್ಪಣ್ಣ ವೀರಭದ್ರಪ್ಪ ಮುರಗಿರವರ ಹೆಸರಿಗೆ ನಿಪಿ.2 ರಂತೆ ಖಾತೆ ಆಗಿರುವುದನ್ನು ಗಮನಿಸಿದಾಗ ಪ್ರತಿವಾದಿಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಆದರೆ ಪುನಃ ದಿನಾಂಕಃ 28.09.1998 ರಂದು ತಿಪ್ಪಣ್ಣ ವೀರಭದ್ರಪ್ಪ ಮುರಗಿ ಮತ್ತು ಕಳಕಪ್ಪ ಸಂಗಪ್ಪ ಮುರಗಿ ಇವರುಗಳ ನಡುವೆ ಪಾಲು ವಿಭಾಗವನ್ನು ಮಾಡಿಕೊಳ್ಳುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಸದರಿ ಕಳಕಪ್ಪ ಸಂಗಪ್ಪ ಮುರಗಿ ಇವರು ಸವಡಿ ಗ್ರಾಮದಲ್ಲಿ ವಾಸವಾಗಿದ್ದು, 1ನೇ ವಾದಿಯ ಗಂಡ ಕೊತಬಾಳದಲ್ಲಿ ವಾಸವಾಗಿದುದ್ದರಿಂದ ಈ ರೀತಿ ಪಾಲುವಾಟ್ನಿ ಮಾಡಿಕೊಂಡಿರುದಾಗಿ, ನಿಪಿ.3 ಮತ್ತು ನಿಡಿ.1 ದಾಖಲೆಯನ್ನು ಮಾಡಿಕೊಂಡು ಪ್ರತಿವಾದಿಗಳ ತಂದೆ ಆತನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ಇರುತ್ತದೆ. ಆದರೆ ಆ ರೀತಿ ಖಾತೆ ಆದ ಮಾತ್ರಕ್ಕೆ ಪ್ರತಿವಾದಿಗಳ ತಂದೆ ಆಸ್ತಿಗೆ ಮಾಲೀಕನಾಗಿರುವುದಿಲ್ಲ. ಒಂದು ಹಂತದಲ್ಲಿ ಪ್ರತಿವಾದಿಗಳು ತಿಪ್ಪಣ್ಣ ವೀರಭದ್ರಪ್ಪ ಮುರಗಿ ಮತ್ತು ಆತನ ಚಿಕ್ಕಪ್ಪ ಕಳಕಪ್ಪ ಸಂಗಪ್ಪ ಮುರಗಿ ಇವರು ಕೂಡಿ ನಡೆಯಲೂ ಆಗದೆ ಇದ್ದುದರಿಂದ ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದಲ್ಲಿ ದಾವಾ ಆಸ್ತಿಯು ಕಳಕಪ್ಪ ಸಂಗಪ್ಪ ಮುರಗಿ ಇವರಿಗೆ ಬಂದಿರುತ್ತದೆ. ಕೊತಬಾಳದ ಆಸ್ತಿಯು 1ನೇ ವಾದಿಯ ಗಂಡ ತಿಪ್ಪಣ್ಣ ಮುರಗಿ ಇವರಿಗೆ ಬಂದಿರುತ್ತದೆಂದು ತಿಳಿಸಿದ್ದು, ಪುನಃ ಸದರಿ ಆಸ್ತಿಯಲ್ಲಿ ಎದುರು ದಾವೆಯನ್ನು ಮಾಡುವ ಮುಖಾಂತರ ಮೂಲ ಮಾಲೀಕ ವೀರಭದ್ರಪ್ಪ ಸಂಗಪ್ಪ ಮುರಗಿ ಹಾಗೂ ಅವರ ಕುಟುಂಬದಲ್ಲಿ ಗೊತ್ತಿದಂತೆ ಸದರಿ ಆಸ್ತಿಯಲ್ಲಿ ಸುಮಾರು 12 ವರ್ಷಗಳಿಂದ ಮೇಲ್ಪಟ್ಟು ಸಾರ್ವಜನಿಕರಿಗೆ ಗೊತ್ತಾಗದಂತೆ ವಿರುದ್ಧ ಮಾಲ್ಕೀ ನಾತೆಯಿಂದ ಸ್ವಾಧೀನಾನುಭವದಲ್ಲಿ ಇರುವುದಾಗಿ ತಿಳಿಸಿರುವುದನ್ನು ಗಮನಿಸಿದಾಗ ಪ್ರತಿವಾದಿಗಳ ತಂದೆ ಕಳಕಪ್ಪ

ಸಂಗಪ್ಪ ಮುರಗಿರವರ ಹೆಸರಿಗೆ ನಿಪಿ.3 ಮತ್ತು ನಿಡಿ.1 ರಂತೆ ಖಾತೆಯಾಗಿರುತ್ತದೆ ಹೊರತು, ಸದರಿ ಸ್ವಾಧೀನಾನುಭವದಲ್ಲಿ ನಿರಂತರವಾಗಿ ಇರುವ ಬಗ್ಗೆ ಮತ್ತು ಆ ಆಸ್ತಿಯ ಖಾತೆಯು ಅವರ ಹೆಸರಿನಲ್ಲಿ ಇರುವುದರಿಂದ ಅವರುಗಳೇ ನಿರಂತರವಾಗಿ ಕಂದಾಯವನ್ನು ಪಾವತಿಸುತ್ತಾ ಬಂದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇರುವುದನ್ನು ಸಹಾ ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ಕೇವಲ ಕಂದಾಯ ದಾಖಲಾತಿಗಳು ಪ್ರತಿವಾದಿಗಳ ತಂದೆ ಕಳಕಪ್ಪ ಸಂಗಪ್ಪ ಮುರಗಿ ಇವರ ಹೆಸರಿಗೆ ಇರುತ್ತದೆ ಎನ್ನುವ ಕಾರಣಕ್ಕಾಗಿ ಅವರಿಗೆ ವಿರುದ್ಧ ಮಾಲ್ಕೀ ನಾತೆಯ ಹಕ್ಕು ಪ್ರಾಪ್ತವಾಗಿರುವುದಿಲ್ಲ.

36. ಈ ದಾವೆಯನ್ನು ವಾದಿಗಳು ಕೇವಲ ಕಂದಾಯ ದಾಖಲಾತಿಗಳನ್ನು ಆಧರಿಸಿ ಮಾಲೀಕತ್ವ ಘೋಷಣೆ ಮತ್ತು ಶಾಶ್ವತ ಪ್ರತಿಬಂಧಕಾಜ್ಞೆ ಆದೇಶ ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ ಹಕ್ಕನ್ನು ನಿಗಧಿಸುವಂತಹ ದಾಖಲೆಗಳನ್ನು ಆಧರಿಸಿ ದಾವೆಯನ್ನು ಸಲ್ಲಿಸಿರುವುದಿಲ್ಲ, ಆ ಕಾರಣಕ್ಕಾಗಿ ಕಂದಾಯ ದಾಖಲೆಗಳನ್ನು ಆಧರಿಸಿ ವಾದಿಯರ ಪರವಾಗಿ ಡಿಕ್ರಿಯನ್ನು ನೀಡಲು ಸಾಧ್ಯವಿಲ್ಲ. ಅದೇರೀತಿ ಪ್ರತಿವಾದಿಗಳು ಸಹಾ ಈ ದಾವೆಯಲ್ಲಿ ವಿರುದ್ಧ ಮಾಲ್ಕೀ ನಾತೆಯ ಹಕ್ಕನ್ನು ಆಧರಿಸಿ ಎದುರು ದಾವೆಯನ್ನು ಮಾಡಿದ್ದು, ಅವರು ಸಹಾ ಹಾಜರುಪಡಿಸಿರುವ ನಿಡಿ.1 ಮತ್ತು 2 ದಾಖಲಾತಿಗಳು ಎಂ.ಆರ್ ಮತ್ತು ಪಹಣಿ ಆಗಿರುವುದರಿಂದ, ಈ ದಾಖಲೆಗಳು ಸಹಾ ಕಂದಾಯ ದಾಖಲಾತಿಗಳು ಆಗಿದ್ದು, ಅವರು ಸಹಾ ಈ ದಾವೆಯಲ್ಲಿ ಹಕ್ಕನ್ನು ನಿರೂಪಿಸುವಂತಹ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗಾಗೀ ಪ್ರತಿವಾದಿಗಳ ದಾವೆಯನ್ನು ತೆಗೆದುಕೊಂಡು ಪ್ರತಿವಾದವನ್ನು ನ್ಯಾಯಾಲಯವು ಒಪ್ಪಿಕೊಂಡಿರುವುದಿಲ್ಲ.

37. ಯಾವುದೇ ವಿರುದ್ಧ ಮಾಲ್ಕೀ ನಾತೆಯ ಮೇಲೆ ದಾವೆಯನ್ನು ಸಲ್ಲಿಸಬೇಕಾದರೆ, ಮೂಲ ಮಾಲೀಕರ ಗಮನಕ್ಕೆ ಇದ್ದು, ಅವರ ತಂಟೇ ತಕರಾರು ಇಲ್ಲದೆ ಸುಮಾರು 12 ವರ್ಷಗಳಿಂದ ಹೆಚ್ಚಿನ ಸಮಯದವರೆಗೆ

ಸ್ವಾಧೀನಾನುಭವದಲ್ಲಿ ಸಾರ್ವಜನಿಕರಿಗೆ ತಿಳಿಯುವ ಹಾಗೇ ಸ್ವಾಧೀನಾನುಭವದಲ್ಲಿ ಇರಬೇಕು ಎಂದು ರುಜುವಾತುಪಡಿಸಬೇಕು ಈ ದಾವೆಯಲ್ಲಿ ಪ್ರತಿವಾದಿಗಳ ಪರವಾಗಿ ಕೇವಲ 4ನೇ ಪ್ರತಿವಾದಿ ಮಾತ್ರ ವಿಚಾರಣೆಗೊಳಗಾಗಿರುತ್ತಾರೆ, ನಿಡಿ.1 ಮತ್ತು 2 ದಾಖಲೆಗಳನ್ನು ಆಧರಿಸಿ ಪ್ರತಿವಾದಿಗಳ ಕುಟುಂಬದವರೇ ಸದರಿ ಆಸ್ತಿಯಲ್ಲಿ ವಿರುದ್ಧ ಮಾಲ್ಕೀ ನಾತೆಯ ಹಕ್ಕಿನಿಂದ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ರುಜುವಾತುಪಡಿಸುವ ಸಲುವಾಗಿ ಯಾವುದೇ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸದೇ ಇರುವುದನ್ನು ಸಹಾ ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ಮತ್ತು ಕಂದಾಯ ರಶೀದಿಗಳನ್ನು ಹಾಜರು ಮಾಡದೇ ಇರುವುದನ್ನು ಸಹಾ ನ್ಯಾಯಾಲಯವು ಸೂಕ್ಷ್ಮವಾಗಿ ಗಮನಿಸಿದಾಗ ಪ್ರತಿವಾದಿಗಳ ಮೂಲ ಪುರುಷ ಕಳಕಪ್ಪ ಮುರಗಿರವರ ಹೆಸರಿಗೆ ಕೇವಲ ಖಾತೆ ಇರುತ್ತದೆ ಹೊರತು ಸದರಿಯವರು ವಿರುದ್ಧ ಮಾಲ್ಕೀ ನಾತೆಯ ಹಕ್ಕಿನಿಂದ ಸ್ವಾಧೀನಾನುಭವದಲ್ಲಿ ಇರುವುದಿಲ್ಲವೆಂದು ಸ್ಪಷ್ಟವಾಗಿ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಈ ಹಂತದಲ್ಲಿ ಅಪೀಲುದಾರರು ಹಾಜರುಪಡಿಸಿರುವ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು.

**(2007) 6 Supreme Court Case 59:**
**P.T. Munichikkanna Reddy and others.**
**V/S**
**Revamma and others.**

**A. Adverse Possession concept ingredients tests to determine possession must be open continuous and hostile to constitute adverse possession openness and hostility meaning. There must be positive intention to dispossess the owner. Intention to dispossess distinguished from intention to possess date of dispossession of the owner i.e. starting point of adverse possession is also important. On facts held, ingredients of adverse**

possession not established. Even an unduly long undisturbed.

Possession did not prove the intention of the adverse possessor: Limitation Act, 1963, Arts. 64 and 65.

B. Adverse possession: Burden of proof. Initial burden lies on landowner to prove his title and possession. Onus then shifts on the other party to prove title by adverse possession. Limitation Act, 1963, Arts. 64 and 65. Limitation Act, 1908, Arts. 142 and 144.

C. Adverse possession. Human rights, right to property is a human right. Adverse possession should be considered in that context. Fact that courts around the world are taking an unkind view to the concept of adverse possession should be kept in mind. Constitution of India. Pt. III. Human Rights.

ಸದರಿ ತೀರ್ಪನ್ನು ಪರಿಶೀಲಿಸಲಾಗಿ ವಿರುದ್ಧ ಮಾಲ್ಕೀ ನಾತೆ ಮೇರೆಗೆ ದಾವೆಯನ್ನು ಸಲ್ಲಿಸಿದಾಗ ನ್ಯಾಯಾಲಯದ ಮುಂದೆ ಯಾವ ಯಾವ ಸಂಗತಿಗಳನ್ನು ರುಜುವಾತುಪಡಿಸಬೇಕು ಮತ್ತು ಕಾಲಪರಿಮಿತಿ ಅಧಿನಿಯಮ ಕಲಂ 64 ಮತ್ತು 65 ರಡಿಯಲ್ಲಿ ಕಾಲಮಿತಿ ಯಾವಾಗ ಪ್ರಾರಂಭವಾಗಿರುತ್ತದೆಂದು ರುಜುವಾತುಪಡಿಸಬೇಕು ಎಂದು ಇರುತ್ತದೆ. ಅದೇರೀತಿ ಅಪೀಲುದಾರರು ಹಾಜರುಪಡಿಸಿರುವ. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪು.

(2019) 8 Supreme Court Cases729:

Ravinder Kaur Grewal and others.

V/S

Manjit Kaur and others.

Radhakrishan Reddy (dead) through legal representatives.

V/S

G. Ayyavoo and others.

A. Limitation Act, 1963- S.27 and Arts. 65 and 64 acquisition of ownership by possession. Effect of elapse of period prescribed for loss of ownership by adverse possession. Nature of rights acquired by adverse possessee thereupon. Remedy available to person who perfects his title to property by adverse possession(Art.65), and even to person in settled possession who is yet to perfect his title by adverse possession(Art.64)

1. Firstly, held, once 12 years' period of adverse possession is over, the owner's right to eject the person in adverse possession (adverse possessee/possessory owner) is lost and the possessory owner acquires the right, title and interest possessed by the outgoing person/owner, as the case may be, against whom he has established the period of prescription.

2. Secondly, held, such adverse possessee/possessory owner can not only seek to protect his title as defendant in a suit but can also file suit for declaration of his title and for permanent injunction restraining defendant from

interfering with his possession, where owner whose title stood extinguished, or any other person seeks to dispossess him from property. This would include the case where the property is sold away by the owner after the extinguishment of his title: in which case also a suit can be filed by a person who has perfected his title by adverse possession to question alienation and attempt of dispossession. Rulings of Supreme Court holding that person who had perfected his title by adverse possession could only protect his title as defendant in a suit, but could not file a suit for declaration of his title/protection of his possession, overruled.

3. Thirdly, held even before ripening of his title by adverse possession, possessory suit under Art. 64 can be maintained by person in settled possession against person seeking to dispossess him by force without recourse to law. Possession confers enforceable right under S. 6 of Specific Relief Act, 1963. Specific Relief Act, 1963. Ss. 6 and 5. Property Law. Possession.

B. Limitation Act, 1963. Art. 65 “Title” Includes title acquired by adverse possession.

If rightful owner does not commence any action to take possession within limitation period, his rights are lost, and the adverse

possessee/possessory owner acquires the right, title and interest possessed by the outgoing person/ owner, an the case may be, against whom he has established the period of prescription. Even if person after acquiring title by adverse possession, delivers possession to owner whose title had thereby extinguished, that would not confer any title on owner Words and Phrases. "Title".

C. Limitation Act, 1963-Art. 65. Adverse possession. Meaning. A negative conferral of title on extinguishment of right of owner of property by prescription.

D. Limitation Act, 1963. Art. 65. Adverse possession. Essential conditions to constitute, restated.

Possession must be adequate in continuity, in publicity and in extent. It must be adverse to owner, in open, visible, notorious and peaceful denial of owner's title or knowledge. Neither mere long possession, nor possession as trespasser would qualify for adverse possession. Possession as joint/co-owner also cannot be presumed to be adverse.

E. Limitation Act, 1963. Art. 65 and S.27. Adverse possession Properties dedicated to public

use. No right by way of adverse possession should accrue in respect of such properties. Act should make this clear.

F. Constitution of India. Act. 141. A decision based upon concession, reiterated, cannot be treated as precedent.

ಈ ಮೇಲಿನ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಲಾಗಿ ಸದರಿ ತೀರ್ಪಿನಲ್ಲಿಯೂ ಸಹಾ ವಿರುದ್ಧ ಮಾಲ್ಕೀ ನಾತೆ ಆಧರಿಸಿ ಯಾರು ದಾವೆಯನ್ನು ಸಲ್ಲಿಸಬೇಕು ಮತ್ತು ಯಾವ ಯಾವ ಸಂಗತಿಗಳನ್ನು ರುಜುವಾತುಪಡಿಸಬೇಕು ಎಂದು ಈ ತೀರ್ಪುಗಳಲ್ಲಿ ಇರುತ್ತದೆ. ಈ ದಾವೆಯಲ್ಲಿ ಸಾಕ್ಷಿದಾರರು, ಈ ಮೇಲಿನ ತೀರ್ಪುಗಳಲ್ಲಿ ತಿಳಿಸಿದ ಪ್ರಕಾರ ಪ್ರತಿವಾದಿಗಳು ಈ ದಾವೆಯಲ್ಲಿ ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯವನ್ನು ಗಮನಿಸಿದಾಗ ಪ್ರತಿವಾದಿಗಳು ಈ ಮೇಲಿನ ಗೌರವಾನ್ವಿತ ನ್ಯಾಯಾಲಯದ ತೀರ್ಪುಗಳಲ್ಲಿ ತಿಳಿಸಿದ ಪ್ರಕಾರ ಕಾನೂನುಬದ್ಧವಾಗಿ ದಾವಾ ಆಸ್ತಿಯಲ್ಲಿ ವಿರುದ್ಧ ಮಾಲ್ಕೀ ನಾತೆ ಹಕ್ಕಿನಿಂದ ಸ್ವಾಧೀನದಲ್ಲಿರುತ್ತಾರೆಂದು ರುಜುವಾತುಪಡಿಸಿರುವುದಿಲ್ಲ. ಹಾಗಾಗಿ ಸದರಿ ಈ ಮೇಲಿನ ತೀರ್ಪುಗಳು ಈ ದಾವೆಯ ವಸ್ತು ವಿಷಯಕ್ಕೆ ಅನ್ವಯವಾಗುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳ ವಿರುದ್ಧ ಮಾಲ್ಕೀ ನಾತೆ ಆಧರಿಸಿ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ರುಜುವಾತುಪಡಿಸದೆ ಇರುವುದರಿಂದ ಎದುರು ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಮಾಡಿಕೊಳ್ಳಲು ಅರ್ಹರಿರುವುದಿಲ್ಲ. ಅದೇರೀತಿ ವಾದಿಗಳು ತಮ್ಮ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಮುಖಾಂತರ ದಾವಾ ಆಸ್ತಿಯಲ್ಲಿ ಮಾಲೀಕರಾಗಿ ಶಾಂತಿಯುತ ಸ್ವಾಧೀನದಲ್ಲಿರುತ್ತಾರೆಂದು ರುಜುವಾತುಪಡಿಸದೆ ಇದ್ದುದರಿಂದ

ವಾದಿಗಳು ಸಹಾ ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುವುದಿಲ್ಲ.

38. ಅಪೀಲುದಾರರ ಪರ ವಕೀಲರು ವಾದ ಮಂಡನೆಯ ಕಾಲಕ್ಕೆ ದಾವಾ ಆಸ್ತಿಯ ಮಾಲೀಕರು ವಾದಿಗಳು ಆಗಿರುವುದಿಲ್ಲ, ಅದೇರೀತಿ ಪ್ರತಿವಾದಿಗಳು ಸಹಾ ಆಗಿರುವುದಿಲ್ಲ ಎಂದರೆ ಆ ಆಸ್ತಿಯ ಮಾಲೀಕರು ಯಾರು ಎಂದು ನ್ಯಾಯಾಲಯವೇ ತೀರ್ಮಾನಿಸಬೇಕೆಂದು ತಿಳಿಸಿದ್ದು, ಘೋಷಣಾತ್ಮಕ ಆದೇಶ ಕೋರಿ ಉಭಯಪಕ್ಷಗಾರರು ದಾವೆ ಮತ್ತು ಎದುರು ದಾವೆಗಳನ್ನು ಸಲ್ಲಿಸಿರುವುದರಿಂದ ಪಕ್ಷಗಾರರೇ ಸೂಕ್ತ ದಾಖಲೆಗಳ ಮುಖಾಂತರ ರುಜುವಾತುಪಡಿಸಬೇಕು ಆ ರೀತಿ ಉಭಯಪಕ್ಷಗಾರರು ಸೂಕ್ತ ದಾಖಲೆಗಳ ಮುಖಾಂತರ ರುಜುವಾತುಪಡಿಸದೇ ಇರುವುದರಿಂದ ಕೇವಲ ಕಂದಾಯ ದಾಖಲೆಗಳನ್ನು ಆಧರಿಸಿ ಘೋಷಣಾತ್ಮಕ ಡಿಕ್ರಿ ನೀಡಲು ಸಾಧ್ಯವಿಲ್ಲ. ಹಾಗಾಗಿ ಅಪೀಲುದಾರರ ಪರ ವಕೀಲರು ಮಂಡಿಸಿರುವ ವಾದವನ್ನು, ಅದೇರೀತಿ ಎದುರುದಾರರು ಹಾಜರುಪಡಿಸಿರುವ ಲಿಖಿತ ವಾದ ಮಂಡನೆಯನ್ನು ಪರಿಗಣಿಸಿರುವುದಿಲ್ಲ. ಆದ್ದರಿಂದ **ಅಂಶ ನಂ.1 ಮತ್ತು 2 ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

39. **ಅಂಶ-3 :-** ಅಂಶ 1 ಮತ್ತು 2 ರಲ್ಲಿ ಚರ್ಚಿಸಲಾದಂತೆ ಈ ಕೆಳಗಿನಂತೆ ಆದೇಶ ಮಾಡಲಾಗುತ್ತಿದೆ.

**::ಆದೇಶ::**

ಮೇಲ್ಮನವಿದಾರರು/ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 41 ನಿಯಮ 1 ಹಾಗೂ ಸಹವಾಚಕ ಕಲಂ 96 ರ ಅಡಿಯಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

ವಿಚಾರಣಾ ನ್ಯಾಯಾಲಯವು ದಿನಾಂಕಃ 01/09/2025 ರಂದು ಅಸಲು ದಾವಾ ಸಂಖ್ಯೆ 97/2019 ರಲ್ಲಿ ನೀಡಿರುವ ತೀರ್ಪು ಮತ್ತು ಡಿಕ್ರಿಯನ್ನು ಸ್ಥಿರೀಕರಿಸಲಾಗಿದೆ.

ಕಛೇರಿಯು ವಿಚಾರಣಾ ನ್ಯಾಯಾಲಯದ ಕಡತವನ್ನು ಈ ತೀರ್ಪಿನೊಂದಿಗೆ ಹಿಂದಿರುಗಿಸತಕ್ಕದ್ದು ಎಂದು ನಿರ್ದೇಶಿಸಲಾಗಿದೆ.

ಕಛೇರಿಯು ಮೇಲ್ಕಂಡ ಆದೇಶದಂತೆ ಡಿಕ್ರಿ ಬರೆಯತಕ್ಕದ್ದು .

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕಯಂತ್ರದಲ್ಲಿ ಬೆರಳಚ್ಚಾದ ನಂತರ ತಿದ್ದುಪಡಿ ಮಾಡಿ ದಿನಾಂಕಃ14.07.2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)

**(ಮಹದೇವಪ್ಪ.ಹೆಚ್.)**
**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ರೋಣ.**